1933
kb / 533
G.R. No 2164
A.No 7985

[illegible]

ಶಿವಾನುಭವ ಗ್ರಂಥಮಾಲಾ [illegible]

# ಸೋಮೇಕಟ್ಟೆ ಕರಿವೃಷಭೇಂದ್ರ

## ಕೈವಲ್ಯ ಪದ್ಯಗಳು.

The Vijay College
LIBRARY,
VIJAY COLLEGE,
BIJAPUR.

Q: 54:4146
13 Som
7985

ವಿಜಾಪುರ.

138

[illegible]

No 438
7985

# ಪ್ರಸ್ತಾವನೆ.

ಮೈಸೂರು ಸೀಮೆಯಲ್ಲಿ ತುಮಕೂರು ಜಿಲ್ಲಾ ತಿಪಟೂರು ತಾಲೂಕಿನಲ್ಲಿ ನೊಣವಿನಕೆರೆ ಎಂಬ ಗ್ರಾಮ ಉಂಟು. ಆ ಊರಿನಲ್ಲಿ ಸೋಮೇಕಟ್ಟಿಮಠ ಎಂಬ ವಿರಕ್ತ ಮಠ ಉಂಟು. ಆ ಮಠದಲ್ಲಿ ಈಗ್ಗೆ ಸುಮಾರು ಅರುವತ್ತು ಎಪ್ಪತ್ತು ವರ್ಷಗಳ ಹಿಂದೆ ಕರಿವೃಷಭದೇಶಿಕೇಂದ್ರರೆಂಬ ಸ್ವಾಮಿಗಳು ಪೂರ್ಣ ಶಿವಾನುಭಾವಿಗಳಿದ್ದು ಅನೇಕ ಭಕ್ತರುಗಳನ್ನು ಅವರು ತಮ್ಮ ಉಪದೇಶಾಮೃತದಿಂದ ಪುನೀತರನ್ನಾಗಿ ಮಾಡಿ ಶಿವೈಕ್ಯರಾದರು. ಇವರು ತಮ್ಮ ಸಣ್ಣ ಕೋಣೆಯಲ್ಲಿ ತೂಗುಮಂಚದ ಮೇಲೆ ಕುಳಿತು ಶಿವಯೋಗನಿದ್ರಾಪರವಶರಾಗಿ ಹಾಡಿದ ಪದಗಳಿವು. ಇವುಗಳನ್ನು ನಾನು ಸಂಗ್ರಹಿಸಿ ಈಗ ವಾಚಕರ ಇದಿರಿಗೆ ಇಟ್ಟಿದ್ದೇನೆ.

**ಹೊನ್ನುಡಿಕೆ** — **H. R. Mahantia.**

ತಾ|| ೩೧—೭—೩೩ — ಸಂಗ್ರಾಹಕ.

The Vijay College
LIBRARY
VIJAY COLLEGE,
BIJAPUR.

The Vijay College LIBRARY VIJAY COLLEGE BIJAPUR.

## ಸೋಮೋಕಟ್ಟಿ ಕರಿವೃಷಭೇಂದ್ರ

# ಕೈವಲ್ಯ ಪದಗಳು.

೧ ಉತ್ಸವವು ನಮಗೇತಕೋ। ನಮಗಿನ್ನು। ಹುಚ್ಚಾಗಿ ತೋರುತಿದೆ
ಇಚ್ಛೆಯಿಲ್ಲದ ಮನಕೆ ಉತ್ಸವವು ಬೇಕೆಂಬ
ಹುಚ್ಚಣ್ಣಗಳು ಕೇಳಿರೋ ।ಪ॥

ಕಾಲು ಕೈ ಕಣ್ಣಿಲ್ಲವೋ। ನಮಗಿನ್ನು। ಮೂಗು ಕಿವಿ ಬಾಯಿಲ್ಲವೋ
ವಾಸನೆಯು ಎಂತೆಂಬ ಘಾಸಿ ನಮಗೇನಿಲ್ಲ
ಜೀವದಾಶ್ರಯವು ಇದುವೆ ।೧॥

ತಪ್ಪು ಇವರೊಳಗಿಲ್ಲವೋ। ಇದ್ದಾಗ್ಯೂ ಅಪ್ಪೈಸಿಕೊಳಲೊಲ್ಲದೆ
ಇಪ್ಪ ಬೀದಿಗಳೊಳಗೆ ಮೆರೆಮೆರೆಸುವಾ ಪ್ರಾರ್ಥನೆಗೆ
ಒಪ್ಪಿಕೊಳ್ಳುವಂದಾರೋ ॥೨॥

ಎಷ್ಟು ದಿನವಿಹುದು ಕಷ್ಟ ಭುವಿಯೊಳಗೆ।
ಎಷ್ಟು ದಿನವಿಹುದು ಅದೃಷ್ಟ।
ದಿಟ್ಟ ಸೋಮೋಕಟ್ಟಿ ಕರಿವೃಷಭಲಿಂಗೇಂದ್ರ।
ನಿನ್ನೊಳಿಟ್ಟುಕೊಳ್ಳೈ ತನುವನು ।೩॥

---

೨ ಜೋ ಜೋ ಜೋ ಎಂದು ಜೋಗುಳ ಪಾಡಿರೆ
ಸತ್ಯ-ಸೋಮೋಕಟ್ಟಿ ಕರ್ತೃ ಕರಿವೃಷಭನ ॥ ಜೋ ॥ ಪ ॥

ಚತುರ್ವಿಧ ಭಕ್ತಿಯೆಂಬ ಅತುಳ ಕಂಭದ ಮೇಲೆ
ವಿತರಣೆ ಎಂತೆಂಬ ಚದರ ತೊಲೆಯ ಹೂಡಿ

ಅತಿಶಯಾನಂದವೆಂಬ ಹಲಗೆಗಳನೆ ಹಾಸಿ
ಮತಿಯುಪರತಿ ಯೆಂಬ ಜೋಡಿ ಕೊಂಡಿಯು ಒಳಿದು ॥೧॥

ಅರಿವೆಂಬ ಸರಪಣಿ ಸರಸದಿಂದ್ಹಾಡುತ
ಸ್ಥಿರವೆಂಬ ತೊಟ್ಟಿಲೊಳು ಪರವೆಂಬ ಶಿಶುವಿಗೆ
ವರವಿವೇಕಗಳೆಂಬ ಹಾಸಿಗೆಯನೆ ಹಾಸಿ
ಚಿರತರ ಸುಖವೆಂಬ ಒರಗು ದಿಂಬುಗಳಿಟ್ಟು ॥೨॥

ಆದಿಯನಾದಿಯಿಂದ ಲತ್ತತ್ತಲ ನುಪಮ
ನಾದ ಶಿಶುವ ನೋಡಿ ನಲಿನಲಿದಾಡುತ
ಸಾಧು ಸಜ್ಜನರೆಲ್ಲ ನೆರೆದು ಕೊಂಡಾಡುತ
ಬೋಧಮಯನ ಕರಿವೃಷಭರಾಜೇಂದ್ರನ ॥೩॥

---

## ಜೋಗುಳ.

೩. ಜೋ ಯೆನ್ನಿರವ್ವಗಳಿರಾ ನೀವೀಗ ಜೋ ಯೆನ್ನಿರಕ್ಕಗಳಿರಾ।
ಜೋಯೆಂದು ಕೂಗಿರೆ ಜ್ಯೋತಿಸ್ವರೂಪನ ಜ್ಞಾನಶಕ್ತಿಯರು ನೀವು ॥ಪ॥

ಆನಂದಮಯನು ನೀನು ಸರ್ವರೊಳು ಓಲೈಸಿಕೊಳಲೊಲ್ಲದೆ।
ಹೀನ ನೆರೆಯೊಳು ನೀನು ಬರಬಹುದೆ ಎಂತೆಂದು ಹೊಕ್ಕುಳವ
ಕೊಯ್ಯಿರವ್ವ ॥೧॥

ಸಚ್ಚಿದಾನಂದ ನೀನು ಪ್ರಕೃತಿಯ ಇಚ್ಛೆಗೋಸುಗವಾಗಿಯೆ।
ಅಚ್ಯೊತ್ತಿದಂದದಲಿ ಇಚ್ಛೆಯೊಳು ಬಂದುದೇ ತಪ್ಪೆಂದು ಬೆಚ್ಚಗೆಯು
ಮಾಡಿರವ್ವ ॥೨॥

ಹುಚ್ಚು ಮಾಯೆಯ ಸಂಗದಿ ಜಗವಿದುವೆ ಹುಚ್ಚಾಗಿ ಮುಳುಗಿ
ಇಹುದು।
ನೀ ಬೆಚ್ಚಿ ಬೆದರಲಿ ಬೇಡ ನಿನ್ನ ನೀ ತಿಳಿ ಯೆಂದು ಬೆಚ್ಚು ನೀರ್ಹಾಕಿರವ್ವ ॥೩॥

ಶ್ರೇಷ್ಠವಿದು ಬಂಗಾರವು ಟೆಂಕದಿಂ ನಷ್ಟವಾಗಿರುವುದೆಂದು।
ನೆಟ್ಟಗೆಯ ಮರಿದು ತೂಪಿರಿದು ದೃಷ್ಟಿಯನಿಟ್ಟು ತಟ್ಟನೆ ॥೪॥



ಮಾತಃ ಮಾತ್ರದ ಶಿಶುವಿದು ಜಗಕೊಂದು ರೀತಿಯಾಗಿ ತೋರಿತಲ್ಲಾ।
ಪುನೀತ ಸೋನೆಕಟ್ಟಿ ಕರಿವೃಷಭಲಿಂಗೇಂದ್ರ ನೀತಿಗಳೆದಿಹ ಜೀವನು ॥೫॥

---

೪. ದೂರಿ ದೂರಿಯ ದುರಿತನಾಶಾಯ।
ಬಾಲೇಂದುಧರ ಈಶ ಭವ ವಿನಾಶಾಯ ॥ಪ॥

ಎತ್ತಣ ಶಿಶುವಿದು ಎತ್ತ ಸೋಗಾತಲಿದೆ
ಹೆತ್ತವಳ ಹೆಸರೇನು ಮತ್ತೆ ತಾತನವಾರು
ಗೊತ್ತಿಲ್ಲ ಶಿಶುವಿದು ಅರ್ಥಿಯಿಂದಾಡುತಿದೆ ॥೧॥

ಆರು ಹುಲಿಯನುಂಗಿ ಆರೆರಡಾನೆಯ ಹಿಂಗಿ
ಮೂರು ಗ್ರಾಮವ ಸುಟ್ಟು ಮೂಲಿಗನಾಗಿದೆ।
ಪಂಚೈವರ ಕೊಂದು ಸಂಚಿತ ಮೂರ ಮೀರಿ
ಪಂಚಮುಖ ಧ್ಯಾನ ನಿರಂತರದೊಳಗಿದೆ ॥೨॥

ದಕ್ಷಿಣ ಕಾಶಿಯೆಂಬ ಮುಕ್ತಿಕ ಪುರಿಯೊಳು
ಈಕ್ಷಿಸಿ ಭಕ್ತರಿಗೆ ಇಷ್ಟಾರ್ಥ ಮೋಕ್ಷವಿತ್ತು
ಶ್ರೇಷ್ಠ ಸೋನೇಕಟ್ಟಿ ಕರಿವೃಷಭೇಂದ್ರ ಶಿಶು
ದೃಷ್ಟಿ ಅಂತರವಿಟ್ಟು ನಲಿನಲಿದಾಡುತ ॥೩॥

---

೫. ನಿದ್ರೆಯ ಮಾಡು ನೀ ಭದ್ರಮಂಟಪದೊಳು
ಕ್ಷುದ್ರ ಗುಣಗಳೇನು ತೋರದಂತೆ ॥ಪ॥

ಸ್ಥೂಲ ತನುವಿನ ಜಾಲವ ಕಳೆದು ನೀ
ಆಲಿಗಳೆರಡಿವೆ ಅಳಚದಂತೆ
ಮೂಲಸ್ಥಾನದ ತುದಿಯೊಳು ತೋರುತಿಹ
ಕಳೆ ಭೇದಿಸಿ ನೋಡಿ ನೀ ಬೆರಗಾಗುತ ॥೧॥

ನಾಸಿಕಾಗ್ರದ ದೃಷ್ಟಿ ಸೂಸಲೀಯದೆ ಮನ
ವಾಸನೆಗಳು ಏನೂ ತೋರದಂತೆ

ಸಾಸಿರ ದಳಪೀಠ ವಾಸವಾಗಿರುತಿಹ
ಭಾಸುರ ಕಳೆಯೊಳು ಲೇಸಿನಿಂದ

ತಳ ಮೇಲು ಚಕ್ರದಿಂದೊಳಹೊರಗಾದ್ಯಂತ
ಥಳಥಳಿಸುವ ಕಳೆ ಬೆಳಗಿನೊಳು
ಹೊಳೆವ ಸೋಮೇಕಟ್ಟಿ ತಿಳಿವ ಕರಿವೃಷಭನೆಂಬ
ಉಳಿಮೆಯ ನೊಳಗೊಂಡ ಇರವಿನೊಳು ॥೬॥

---

## ಉದಯರಾಗ.

೬. ಏಳು ಕರಿವೃಷಭೇಂದ್ರ ಏಳು ಯತಿಕುಲಚಂದ್ರ
ಭಾಳಾಕ್ಷ ಶಿವಶರಣರೋಲೈಸಿ ನಿಂದಿಹರು ॥ಪ॥

ದಳನಾಲ್ಕು ದಳವಾರು ದಳಹತ್ತು ಹನ್ನೆರಡು
ದಳ ಹದಿನಾರು ದ್ವಿದಳದೊಳಗಾಡುತ ॥೧॥

ಸಾಸಿರ ದಳ ಪೀಠವಾಸ ತೊಟ್ಟಿಲೊಳು
ಭಾಸುರ ಬೆಳಕನು ಲೇಸಿನಿಂ ನೋಡುತ ॥೨॥

ಮೂರು ದಳದ ಪೀಠ ಮೀರಿ ಪಶ್ಚಿಮದೊಳು
ಸಾರತರದ ಸುಖವ ಸೂರೆಗೊಂಡಾಡುತ ॥೩॥

ನವಚಕ್ರ ನವಲಿಂಗ ನವಶಕ್ತಿ ನವಭಕ್ತಿ
ನವವಿಧ ಕಳೆಯೊಳು ನಲಿನಲಿದಾಡುತ ॥೪॥

ಆದಿಮಧ್ಯಾವಸಾನ ಭೇದರಹಿತನು ನೀ
ನಾದ ಸೋಮೆಕಟ್ಟಿ ಅನಾದಿ ಕರಿವೃಷಭೇಂದ್ರ ॥೫॥

---

೭. ಲಹರಿಗೊಂಡಿದೆ ಮನವು ಐಮೊಗನ ಧ್ಯಾನದೊಳು
ಸಹಿ ಸಹಿ ಸಹಿ ಎಂಬ ಸಹಜಾನಂದದೊಳು ॥ಪ॥



ಎಷ್ಟು ಜನ್ಮದ ಜಾಡ್ಯ ಕಷ್ಟ ಹರಿಯಿತು ಇಲ್ಲಿ
ಇನ್ನೆಷ್ಟು ಜನ್ಮದ ಸುಕೃತ ಗಟ್ಟ್ಯಾಯ್ತೊ ಶಿವನೆ
ಸತಿಯು ಮರೆದಿಹ ಪುರುಷನತಿಬೇಗ ಬಂದಂತೆ
ಗತಿಯು ತಪ್ಪಿದ ನರನು ಪಥವ ಕಂಡಂತೆ ॥೧॥

ಅರಿವು ಮರವೆಗೆ ಸಾಕ್ಷಿ ಇರುವ ವಸ್ತುವಿನೊಳಗೆ
ಪರವಶಾನಂದಪರನಾಗಿ ನಿಂದು
ಚಿರತರಾನಂದ ಸುಖರಸದೊಳಗೆ ಮುಳುಗುತ್ತ
ಪರಮಾನಂದ ಪೂರ್ಣನಾಗಿ ॥೨॥

ಅರಿವು ಮರವೆಗೆ ಆದಿ ಇರವು ತಾನೆ ತನ್ನ
ಕುರುಹನರಿಯದೆ ಪರನ ಮರೆದು
ಇರುವ ಸೋಮೆಕಟ್ಟೆ ಕರಿವೃಷಭಲಿಂಗ
ದಿರವೆ ತಾನಾಗಿ ಈ ಪರಿಯೊಳಿರುತ ॥೩॥

---

೮ ಯಾಕೆ ಮರೆದಿಹೆ ಮನವೆ ನೀನಾರು ಪೆಸರೇನು
ರೂಪಿಸಿದ ಠಾವೆಲ್ಲಿ ನೀ ಲಯಪುದೆಲ್ಲಿ ॥ಪ॥

ಪಿತ್ತ ಹತ್ತಿದ ನರನು ಮತ್ತೆ ಈ ಮನೆಯೆಲ್ಲ
ಸುತ್ತ ತಿರುಗುತಿದೆ ಎಂತೆಂಬೋಲು
ಗೊತ್ತು ತಿಳಿಯದೆ ನೀನು ಮರ್ತ್ಯಲೋಕವು ಎಂಬ
ಕತ್ತಲೆಯೆ ನಾನೆಂಬೆ ನಿರರ್ಥ ಮನವೆ ॥೧॥

ತೃಷೆಯಾದ ಮನುಜ ತಾ ಹಸಿದು ಬಿಸಿಲೊಳು ಬಂದು
ಎಸೆವ ಚೌಳು ಭೂಮಿಯೊಳು ಜಲವಿರ್ಪುದೆಂದು
ದೆಸೆದೆಸೆಯ ತಿರುಗಿ ತಾ ಬಸವಳಿದು ಬಿದ್ದಂತೆ
ಹಸನಾಯಿತಲ್ಲ ನೀ ಪುಸಿಯ ಪಿಡಿದಿಹುದು ॥೨॥

ಎಲ್ಲ ಮರವೆಯ ಬಿಟ್ಟು ನಿನ್ನ ನಿಜವಳವಟ್ಟು
ಫುಲ್ಲ ಶರನನು ಸುಟ್ಟು ಭಸಿತವಿಟ್ಟು

ಬಲ್ಲ ಸೋಮೇಕಟ್ಟಿ ಕರಿವೃಷಭಲಿಂಗೇಂದ್ರ
ನಲ್ಲದೇ ನಿಲ್ಲವೆನೆ ಮನ ಮುಕ್ತಿವಟ್ಟು ॥೪॥

---

೯. ಸುಖವುಗೊಂಡಿದೆ ಮನವು ನಿಖಿಳ ಕೃತಿಗಳ ಮರೆದು
ಅಕಳಂಕ ಪರಬ್ರಹ್ಮದರಿವಿನೊಳಗೆ ॥ಪ॥

ಹಸಿದ ಪಶು ತಾ ಪೋಗಿ ಎಸೆವ ಗರುಕೆಯ ಮೇದು
ಹೊಸ ಪರಿಯ ಸುಖದಲ್ಲಿ ಮುಳುಗಿ ಮಲಗಿ
ಪಸರಿಸುತ ಮೆಲುಕಿಡುತ ಮುಂದೆಸೆಯ ಕಾಣದೆ ಇರುವ
ಪಶುವಿನಂದದೊಳು ಮನ ನಸಿದು ಸುಖದೊಳಗೆ ॥೧॥

ನಿದ್ರೆಯೊಳಗಿಹ ಮನುಜ ಎದ್ದು ಉಪಾಧಿಯೊಳು ತನ್ನನುವ
ತಿದ್ದಿಕೊಳ್ಳದಲೆ ತಾನಿರುವೆಡೆಯೊಳು
ಅದ್ದಿತೋರುವ ಸುಖದ ಮುದ್ದೆಯಾಗಿರುವಂತೆ
ಬದ್ಧವಾಗಿ ಮನವು ಬ್ರಹ್ಮ ಸುಖದಿ ॥೨॥

ಇಪ್ಪವಾಗಿಹ ವಸ್ತು ನೆಟ್ಟಗೆಯು ತಾನಿರ್ದ
ಬಟ್ಟೆಯನೆ ಪಿಡಿದು ತನ್ನಲ್ಲಿ ಗೃಧಿದೊಳು
ನೆಟ್ಟಗೆಯು ಈ ಮನವು ದೃಷ್ಟಿಯನು ಚದರಿಸದೆ
ಮುಟ್ಟಿ ಸೋಮೇಕಟ್ಟಿ ಕರಿವೃಷಭಲಿಂಗದೊಳು ॥೩॥

---

೧೦. ನೋಡಿ ತಿಳಿವುದು ನೀನೆ ನಿಜವೆಂದು ತತ್ವಗೂಢದಿ ನಿಂದ ಸಾಕ್ಷಿಕನೆಂದು ।
ಪಂಚವಿಂಶತಿ ತತ್ವಗಳಿವು ಎಲ್ಲಾ ನನ್ನ ಅಂಶದಿ ಆದುವು ಅವು ಎಲ್ಲಾ ॥ಪ॥

ತ್ರಿಂಶತಿ ಕೋಟಿದೇವತೆಯೆಲ್ಲಾ ಪರಾಂಶದಿ ಆದುವು ತಾವೆಲ್ಲಾ।
ಹಂಸೋ ಹಂಸೋ ಹಂಸೆಂನು ಜೀವಾಂಶಿಯು ಮೀರಿದ ನಿಜವೆಂದು ॥೧॥



ತೋರುವ ಜಗವದು ವೃಷೆ ಯೆಂದು ಈ ಭಾರಕತ್ವವು ತನಗೆ ಪುಸಿಯೆಂದು।
ತೋರುವ ಕಲ್ಪಿತ ಇದು ಎಂದು ನಾ ಮೀರಿದ ವಸ್ತುವು ದಿಟವೆಂದು ॥೨।

ಸೋಮೆಕಟ್ಟಿಯು ಕರಿವೃಷಭನೆಂದು। ಭೂಮಿಯೊಳವತಾರದಂತೆ ಕಂಡು।
ಸಾಮಿಪ್ಯ ಫಲಗಳ ಮೀರಿ ನಿಂದು ಪ್ರೇಮಾಸ್ತಿ ಭಾತಿಗತೀತನೆಂದು ॥೨॥

---

೧೧. ನೋಡೋಣ ಬಾರೆ ಸಖಿ ಪ್ರಾಣಕಾಂತನ। ಕೂಡೋಣ ಬಾರೆ
ಕರಿವೃಷಭೇಂದ್ರನ। ಮುಕ್ತಿಸಾಂದ್ರನ ಯತಿ ಕುಲಚಂದ್ರನ ॥ಪ॥

ಆಗಮಾತೀತನಭೇದ್ಯನ ನಿಗಮಾಗಮಂಗಳಿಗೆ ಸಿಲುಕದಾತನ।
ಭೋಗರಹಿತಸ್ವಪ್ರಕಾಶನ ಜನನದಾಗುಹೋಗುಗಳಿಲ್ಲದಾತನ ॥೧॥

ಮೂರು ಮೂರ್ತಿಗೆ ಮೂಲದಾತನ ಮೂರಾರು ಲಿಂಗದಿ ಬೆರೆದಾತನ।
ವಾರಿಜಭವತಾತ ಪ್ರೀತನ ಗುರು ಈರೇಳು ಲೋಕಕತೀತನ ॥೨॥

ನಾಮರೂಪಗಳಿಲ್ಲದಾತನ ಪ್ರೇಮಾಸ್ತಿ ಭಾತಿಗತೀತನ
ಸಾಮಗಾನ ಸಂಪ್ರೀತನ ಶ್ರೀಮತ್ಸೋಮೆಕಟ್ಟಿ ಕರಿವೃಷಭೇಂದ್ರನ ॥೩॥

---

೧೨. ಕಾಣದಿರಲಾರೆನೆ, ಶ್ರೀಗುರುವನು ಕಾಣದಿರಲಾರೆನೆ
ಕಾಣದೆ ನಿಲಲಾರೆ ಪ್ರಾಣಕಾಂತನ ನೀರೆ
ಜಾಣತನದಿ ಫಣಿವೇಣಿ ನೀ ಕರೆತಾರೆ ॥ಪ॥

ಮಾಯ ಸಂಸಾರವೆಂಬ ಮೋಹಕೆ ಸಿಲ್ಕಿ ಆಯಾಸಪಡುತಲಿರೆ
ಕಾಯಜನನು ಸುಟ್ಟು ಬೂದಿಯ ಫಣೆಗಿಟ್ಟ
ಮಾಯರಹಿತ ಗುರುರಾಯನ ಪಾದವ ॥೧॥

ಅಂತರಂಗದಿ ಕರೆದು ಯನ್ನೊಳಗಿರ್ಪ ಚಿಂತೆ ಯೆಲ್ಲವ ಪರಿವ।
ಸಂತೋಷದಿಂದೆನ್ನ ತನುಮನದೊಳು
ನಿಂತು ಸೂರೆಯುಗೊಂಡ ಕಾಂತನ ಪಾದವ ॥೨॥

ಕರುಣಾಮೃತ ಹಸ್ತವ ಶಿರದೊಳಿಟ್ಟು ಪರಮಪಂಚಾಕ್ಷರಿಯ।
ಒರೆದೆನ್ನ ಕರ್ಣದಿ ಪರಮ ಲಿಂಗವ ಯನ್ನ
ಕರದೊಳಗಿಂಬಿಟ್ಟ ಗುರುವಿನ ಪಾದವ ॥೩॥

ಹರುಷವೆಂಬ ತೊಡೆಯ ಮೇಲೆ ಕೂಡ್ರಿಸಿ ಸರಸವಾಡುತಲೆನ್ನಯ
ವರ ಜಿಹ್ವೆ ತುದಿಯೊಳಗದರ ಪಾನವ ಹೂಡಿ
ನೆರವೇಕ ಮಯನಾದ ಗುರುವಿನ ಪಾದವ ॥೪॥

ವರನಾದವೆಂಬ ಹಾಲು ಅದಕೆ ತಕ್ಕ ಪರಮ ಚಿತ್ಕಳೆ ಶರ್ಕರೆ
ವರಬಿಂದು ರುಚಿ ಎಂಬ ಪಣ್ಣುಗಳನು ಹೂಡಿ
ಎರೆದೆನ್ನ ಜಿಹ್ವೆಗೆ ಕರೆದು ನೆರೆದು ಪೋದ ॥೫॥

ಮರವೆ ಎಂಬುವ ಸೀರೆಯ ಸೆಳೆದು ನಿಜಪರಿವೆಂಬ ಅಂಬರವ
ಸರಸದಿಂದುಡಿಸಿ ಮೈದಡಹಿ ಕರೆದು ಯೆನ್ನ
ಉರವನಪ್ಪಿದ ಗುರುವರನ ಬೇಗದಿ ನೀರೆ ॥೬॥

ಭಾವಾಭಾವವ ನೆಲ್ಲವ ತೀವಿದ ಗುರುದೇವ ಸೋಮೆಕಟ್ಟಿಯ
ರಾಯ ಕರಿಬಸವಗುಪಾಯಗಳನು ಹೇಳಿ
ಭಾವಜ ವೈರಿಯ ನೀರೆ ನೀ ಕರತಾರೆ ॥೭॥

---

೧೩. ಧ್ಯಾನವಮಾಡುನೀನು। ಮಾನಸ ಧ್ಯಾನವಮಾಡು ನೀನು
ಸ್ವಾನುಭವ ಸುಜ್ಞಾನ ನಿರಂತರ ಭಾನುಪ್ರಕಾಶನ ॥ಪ॥

ಅಂಗದ ಗುಣ ಹಿಂಗಿ। ಲಿಂಗದ ಸಂಗದಿ ಮನ ನುಂಗಿ
ಕಂಗಳು ಮೂರುಳ್ಳ ಮಂಗಳ ಮಹಿಮನ
ಗಂಗೆಯ ಧರಿಸಿದ ಘನ ಮುನಿ ವಂದ್ಯನ ॥೧॥



ಅಂತರಂಗದೊಳಗೆ। ಅನುದಿನ ಸಂತತ ನಿನ್ನೊಳಗೆ
ಚಿಂತೆಯ ನೀಗಿ ನಿರಂತರ ಬ್ರಹ್ಮ
ಚಿಂತೆಯೊಳನುದಿನ ಸಂತತವಿರುತಿರು ॥೨॥

ನಾಚಿಕಿಲ್ಲವೇನೋ। ಜನ್ಮದ ರೋಸಿಕಿಲ್ಲವೇನೋ
ಈಶನ ಧ್ಯಾನಕೆ ಬೇಸರ ಮಾಡದೆ
ಭಾಸುರ ಲಿಂಗದ ವಾಸವ ಮಾಡುತ ॥೩॥

ಇನ್ನಾದರು ನಿನ್ನ। ನಾನಾರೆನ್ನುತ ಸಂಪನ್ನ
ಚೆನ್ನಾಗಿ ಗುರುಮುಖದಿಂದ ತಿಳಿದು
ನೀ ನಿನ್ನನೆ ನಿಜವೆಂದೆನ್ನುತ ಮನದೊಳು ॥೪॥

ಧರೆಯೊಳಧಿಕವಾದ। ಮೂರುಸಾವಿರದೊಳಗಾದ
ಪರಮ ಸೋಮೆಕಟ್ಟಿ ಕರಿವೃಷಭಾರ್ಯನ
ಚರಣಕಮಲವನ್ನು ಮರೆಯದೆ ನಿನ್ನೊಳು ॥೫॥

---

## ಪುಷ್ಪಾಂಜಲಿ.

೧೪. ಪುಷ್ಪದ ವೃಷ್ಟಿಕರೆವೆನೋ ಭಾವನಿಷ್ಠೆಯೊಳಿರುವಂಥ
ಶ್ರೇಷ್ಠರ ಪಾದಕ್ಕೆ ಪುಷ್ಪದ ವೃಷ್ಟಿ ಕರೆವೆನೋ ॥ಪ॥

ನಾಲ್ಕುದಳದ ಚೌಕ ಮಧ್ಯ ನಕಾರದಿ। ಭೇದಿಸಿ ಇರುವಂಥ ಭಕ್ತನೊಳು
ಪೀತವರ್ಣದ ಪುಷ್ಪವ ಬ್ರಹ್ಮ ಪಿಡಿದು ಬೇಕಾಗಿ ಚೆಲ್ಲಿದ
ಆಧಾರದೊಳು ನಿಂದು ॥೧॥

ಆರೆಸಳಿನ ಮಧ್ಯ ಮಕಾರದಿ। ಜೋಕೆಯೊಳಿರುವ ಮಹೇಶನೊಳು
ಶ್ವೇತ ವರ್ಣದ ಪುಷ್ಪ ವಿಷ್ಣು ಪಿಡಿದು ಪ್ರೀತಿಯಿಂ ಚೆಲ್ಲಿದ
ಸ್ವಾಧಿಷ್ಠದೊಳು ನಿಂದು ॥೨॥

ದಶದಳಕಮಲದವಶದಶಿಕಾರದಿ। ಮಿಸುನಿಯಂತಿರುವ ಪ್ರಸಾದಿಯೊಳು
ಹರೀತ ಪುಷ್ಪದ ರುದ್ರ ಪಿಡಿದು ಶೀಘ್ರದಿ ಚೆಲ್ಲಿದ
ಮಣಿಪೂರಕದಿ ನಿಂದು ॥೩॥

ಹತ್ತೆರಡೆಸಳೊಳು ಒತ್ತಿ ವಕಾರವ। ಅರ್ಥಿಯಿಂ ಪ್ರಾಣಲಿಂಗಿಯೊಳು
ಈಶ್ವರ ಕರದೊಳು ಮೂಂಜಿಷ್ಟವ ಪಿಡಿದು
ಅನಾಹತ ಚಕ್ರದ ಚರಲಿಂಗಮೂರ್ತಿಗೆ ॥೪॥

ಹದಿನಾರುದಳಮಧ್ಯ ವಿಧಿಸಿ ಯಃಕಾರವ ಪರಮಶ್ರೀಶರಣಸಹಿತ ನಿಂದು
ಕಪೋತ ಪುಷ್ಪವ ಸದಾಶಿವನು ಬೇಕಾಗಿ ಕಳೆದನಃ
ವಿಶುದ್ಧಿಯೊಳು ನಿಂದು ॥೫॥

ದ್ವಿದಳಕಮಲಮಧ್ಯ ಝೋಂಕಾರವ ಹರುಷದಿಂದೈಕ್ಯಸಹಿತನಿಂದು
ಷಡ್ವಿಧ ಪುಷ್ಪವ ಮಹಾಲಿಂಗಕ್ಕೆ
ಆಜ್ಞಾಚಕ್ರದಿ ನಿಂದು ॥೬॥

ಆರು ಲಿಂಗಂಗಳ ಮೂರು ಪಾಲನೆ ಮಾಡಿ
ಗುರುಲಿಂಗಜಂಗಮದೊಳು ತಿಳಿದು
ಪರಮ ಸೋಮೋಕಟ್ಟಿ ರುದ್ರರಾಚಯ್ಯಗೆ
ಅರ್ಥಿಯಿಂ ಭಕ್ತರೆಲ್ಲರು ನಿಂದು ॥೭॥

---

೧೫. ಕಾಂತೆ ಪೋಗಿ ಕರೆದು ತಾರೆ ಕಾಂತ ಕರಿವೃಷಭೇಂದ್ರನ
ಮಮ ಚಿಂತಾ ಮುಕ್ತಿ ಕಾಂತನ। ಏಕಾಂತ ಕರಿವೃಷಭೇಂದ್ರನ ॥ಪ॥

ರಿಪುಗಳೆಲ್ಲರ ಗೆದ್ದು ತಪದೊಳಪರಿಮಿತ ಸ್ವರೂಪನ
ಗುಪಿತ ಮುಕ್ತಾಂಗನೆಯ ಕೂಡಿ ಸಫಲ ಬ್ರಹ್ಮಸ್ವರೂಪನ ॥೧॥

ಹೃದಯ ಮಣಿ ಮಂಚದೊಳು ಕುಳಿತು ಚದುರೆ ಬಾರೆಂದು ಕರೆದನ
ಒದಗಿ ಬಂದು ಕುಚವ ಪಿಡಿದು ಅಧರಾಮೃತವನು ಸವಿದನ ॥೨॥

ಷಣ್ಮುಖಿಯು ಶಾಂಭವಿಯು ಖೇಚರಿ। ಸನ್ನುತದಿ ಗುರು ತೋರಿದ
ಚಿನ್ಮಯಾತ್ಮಕ ಸನ್ನೆವೆರಸುತ ಉನ್ಮನೆಯೊಳೋಲಾಡಿದ ॥೩॥

ಭೇದಿಸೆನ್ನವಗುಣಗಳಳಿದು। ಬಾಧೆಯೆಲ್ಲವ ಬಿಡಿಸಿದ
ಓದು ಶಿವನ ನಾಮವೆಂದು ಬೋಧರೂಪನು ಪೇಳಿದ ॥೪॥



ದ್ರವಿಸುವಂಥ ಮನಕೆ ಬುದ್ಧಿಯ ಧರ್ಮರೂಪನು ಪೇಳಿದ
ಚಿನುಮಯಾತ್ಮಕ ಚಿತ್ತು ಆಗಿ ಘನವ ಎನ್ನೊಳು ತೋರಿದ ॥೫॥

ಸ್ವಾನುಭವದ ಸುಖವ ತೋರೆನ್ನ ಸಸ್ವರೂಪಳ ಮಾಡಿದ
ತಾನು ತಾನಃ ತಾನೆಯಾಗೆ ನೀನೆ ನಾನೆಂದರುಪಿದ ॥೬॥

ಮೀರಿದಾನಂದಾಬ್ಧಿ ಸುಧೆಯೊಳು ನೀರೆ ಮುಳುಗೆಂದರುಹಿದ
ಕಾರಣಿಕದ ಗುರುವು ತನ್ನಯ ಕರುಣ ರಸದೊಳು ಕೂಡಿದ ॥೭॥

ನಷ್ಟ ಮಾಡಿದ ಅಷ್ಟ ಮದಗಳ ದುಷ್ಟರೆದೆಯನು ಮೆಟ್ಟಿದ
ಸೃಷ್ಟಿಗಧಿಕ ಸೋಮೆಕಟ್ಟಿ ಪಟ್ಟದ ಕರಿವೃಷಭನ ॥೮॥

---

೧೬. ಮಂಗಳಂ ಮಂಗಳಂ ಮದ್ಗುರು ಮೂರ್ತಿ ಮಂಗಳಂ ಮಂಗಳಂ
ಮಂಗಳಂ ಮಹಿಮಾತ್ಮ ಲಿಂಗ ಸನ್ಮುನಿ ಸಂಗ
ಶೃಂಗ ರಂಗ ವಿರಹಿತ ಆನಂದ ॥ಪ॥

ಶಿವರೂಪ ಶಿವಲೇಪ ಶಿವಪೂಜ ನಿಷ್ಠಂತೆ
ಪ್ರವಿಮಲ ರೂಪ ಪ್ರಕಾಶತೆ ಲಸತೆ
ಅವಿರಳ ಜ್ಯೋತಿ ನಿರಾಕಾರಮಯ ಶಿವ
ಭವರಹಿತಾಂಶು ಸುಧಾಂಶುತೆ ಸುಮನಂ ॥೧॥

ಚಾರು ನಿರಾಕಾರ ಸಾಕರ ವಂದಿತ
ಸಾರಸದಾರ ಸಮಾರ ಧೀರಂ
ಪಾರಾವಾರ ಗಂಭೀರ ಸನ್ಮುನಿಗಣ
ಕಾರಣ ಪುರುಷ ನಿದಾನ ಸಂಧಾನಂ ॥೨॥

ಶರಣು ಜಂಗಮ ಲಿಂಗ ಶರಣು ಸದ್ಭಾವಾಂಗ
ಶರಣು ವಿಷಕಂಠ ಕವಿಮನಾಬ್ಜ ಭೃಂಗ
ಶರಣು ಕರಿವೃಷಭಾರ್ಯ ಷಟ್ಸ್ಥಲದೀಶ್ವರ
ಪರಮ ಸೋಮೆಕಟ್ಟಿ ವರದಗ್ರಗಣ್ಯಂ ॥೩॥

---

೧೭ ಮುನ್ನ ನಾನೇನು ಸುಕೃತವ ಮಾಡಿದ್ದೆನು
ಚನ್ನಕರಿಬಸವ ದೇಶಿಕ ಬಂದ ಮನೆಗೆ ॥ಪ॥

ಈಡ ಪಿಂಗಳವೆಂಬ ಜೋಡು ಪಾವುಗೆ ಮೆಟ್ಟಿ
ನಾಡೊಳಗೆಲ್ಲಾ ಸಂಚಾರ ಮಾಡುತಲಿ
ಬೇಡಿದ ಭಕ್ತರ್ಗೆ ನೀಡುತ ಕರುಣವ
ರೂಢಿಗಧಿಕವಾದ ಗುರು ಬಂದ ಮನೆಗೆ ॥೧॥

ಜ್ಞಾನವೆಂಬುವ ದಂಡ ನೇಮವೆಂಬುವ ಪಾತ್ರೆ
ಸ್ವಾನುಭವದ ಕಾವಿಯಂಬರವ ಪೊದೆದು
ತಾನು ತನ್ನೊಳಗೆ ವಿನೋದದಿಂದಾಡುತ
ಭಾವ ಭಜಕರ ಬಾಂಧವ ಬಂದ ಮನೆಗೆ ॥೨॥

ತನುಲಿಂಗವಳಿದು ತಾ ಘನಲಿಂಗ ಕಳೆಯನೆ
ವಿನಯದಿಂ ತೋಳಿಗಾಧಾರ ಮಾಡಿ ಧರಿಸಿ
ಅಂಗವೆ ಗುರುವಿಷ್ಟಲಿಂಗವಧರಿಸಿ
ಜಂಗಮ ರೂಪಿನ ಲಿಂಗ ಬಂದ ಮನೆಗೆ ॥೩॥

ಅನುಪಮ ಚಿತ್ತ ಚಿನುಮಯ ಭೂತಿಯ
ವಿನಯದಿಂದಂಗದೊಳನುದಿನ ಧರಿಸಿ
ಪರತತ್ವಮಯನಾದ ಪರಲೋಕದರಸಾಗಿ
ಸ್ಥಿರ ಮುಕ್ತಿ ನೆಲೆಯಾಗಿ ಪರವೇ ತಾನಾಗಿ ॥೪॥

ಬಿಂದುವೆ ರೂಪಾದ ಆನಂದ ರುದ್ರಾಕ್ಷಿಯ
ಚಂದದಿಂದಂಗ ಮುಖಂಗಳೋಳ್ ಧರಿಸಿ
ಇಂದು ಈ ಜಗದೊಳು ನಿಂದು ಚರಿಸಾಡುತ
ಬಂದ ಎಮ್ಮಯ ಗುರು ತಂದೆ ನಮ್ಮ ಮನೆಗೆ ॥೫॥

ಕರುಣಾರಸವೇ ತೀರ್ಥ ಪರವೆಂಬ ಪ್ರಸಾದ
ನಿರುತ ಪಂಚಾಕ್ಷರಿ ಯಿರವೆ ತಾನಾಗಿ
ಧರಣಿಯೊಳಿರುವಂಥ ಶರಣ ಜನಂಗಳ
ಪೊರೆದು ರಕ್ಷಿಸ ಶ್ರೀ ಗುರು ಬಂದ ಮನೆಗೆ ॥೬॥



ಪರಿಪೂರ್ಣಮಯನಾಗಿ ಪರಬ್ರಹ್ಮದಿರವಾಗಿ
ಸ್ಥಿರ ಮುಕ್ತಿ ನೆಲೆಯಾಗಿ ಪರವೇ ತಾನಾಗಿ
ಪರಮ ಸೋಮೇಕಟ್ಟಿ ಕರಿವೃಷಭಾರ್ಯ
ತಾ ಪೊರೆದು ರಕ್ಷಿಸುವ ಶ್ರೀ ಗುರು ಬಂದ ಮನೆಗೆ ॥೭॥

---

೧೮. ಸಚ್ಚಿದಾನಂದದೊಳ್ ಸದಾ ಬೆರೆಯುವ। ವಿಧವ ತಿಳಿಯದೊಡೆ
ಒದವಿದ ಯೌವನ ವಿಧವೆಗೆ ಆದರೆ ಅದರಂತಿಹುದು ॥ಪ॥

ಎಷ್ಟು ಓದಿದರೇನು ಶಾಸ್ತ್ರದ ಗುಟ್ಟು ತಿಳಿಯದಿರೆ
ಕಷ್ಟವಲ್ಲದೆ ಪರಿಭವ ಕೆಡಿಸುವ ಎಷ್ಟು ಮಾತ್ರವಿಲ್ಲ ॥೧॥

ಮುದ್ರೆ ಮೂರನು ಪಿಡಿದು ನವದ್ವಾರವ ಭದ್ರಮಾಡಿದರಿಲ್ಲ।
ಸಿದ್ಧದಿ ಯಮ ಮೊದಲಾದಷ್ಟಾಂಗಯೋಗ ನಿದ್ರೆ ಮಾಡಿದರಿಲ್ಲ ॥೨॥

ದೇಶ ದೇಶವ ತಿರುಗಿ ಕಾಶೀವಾಸ ಮಾಡಿದರಿಲ್ಲ।
ಬೇಸರವಿಲ್ಲದೆ ನೆಲ ಬಿಲಸಮಾಧಿಯೊಳುಪವಾಸ ಮಾಡಿದರಿಲ್ಲ ॥೩॥

ಇಂದೇ ಸುಜನ್ಮದ ಸುಕೃತದ ಬೆಳಸು ರಾಶಿಯಾಗಬೇಕು।
ಭಾಸುರ ಗುರುವಿನ ಕರುಣ ಕಟಾಕ್ಷವು ಈಸು ಮಾಡಬೇಕು ॥೪॥

ದಿಟ್ಟ ಸೋಮೇಕಟ್ಟಿ ಕರಿವೃಷಭಾರ್ಯನ।
ದೃಷ್ಟಿ ಪಡೆಯಬೇಕು ॥೫॥

---

೧೯. ಜ್ಯೋತಿ ಬೆಳಗುತಿದೆ ಜ್ಯೋತಿ। ಅತ್ಯತಿಷ್ಠತಿದ್ವಾದಶಾಂಗು
ಲದಿಸ ಭಾತಿ। ಜ್ಯೋತಿ ಬೆಳಗುತಿದೆ ॥ಪ॥

ತಾಲು ಮೂಲ ಫಣೆಯಲ್ಲಿ। ತತುನೀಲ ತೋಯದ ಮಧ್ಯದಲ್ಲಿ
ಬಾಲಾರ್ಕ ಕಳೆ ಬೆಳಕಲ್ಲಿ। ತ್ವಂ ಮೂಲ ಜ್ಯೋತಿಯೋಳ್ ನೀ ಬೆರೆದಲ್ಲಿ॥೧॥

ಇಂದ್ರಿಯ ಪ್ರಧಾನದಲ್ಲಿ ಅಸಿ ಚಂದ್ರನ ಕಳೆ ಕಪ್ಪಿನಲ್ಲಿ।
ರಂಧ್ರಮಾಣಿಕ ಮುತ್ತಿನಲ್ಲಿ ನವರಂಧ್ರ ಜ್ಯೋತಿ ಮುಂದಿದಿಲ್ಲಿ ॥೨॥

ಕುಂಡಲಿಯ ನಾಳದಲಿ ತುದಿ ಪುಂಡರೀಕದ ಪತ್ರದಲ್ಲಿ।
ದಂಡಿಕೋಲಿನ ನಾಳದಲ್ಲಿ ಕರಿವೃಷಭಿರ್ದನು ಅಪಜ್ಯೋತಿಯಲ್ಲಿ ॥೩॥

---

೨೦. ಮರೆಯ ಬೇಡವೆ ರಮಣಿ ಗುರುವಿನರಿವನು

ಮರೆಯಬೇಡ ಗುರುವಿನರಿವ
ಕರಿವೃಷಭರಾಜನೆನಗೆ ವರ ಕುರುಹ ತಿಳುಹಿದ ನೀನು
ಸರಿಯುಳಾಗು ಸುಗುಣೆ ಎಂದ ॥ಪ॥

ಸ್ವಾಮಿ ಕಂಡೆನು ಎನ್ನ ಸಲಹು ಎಂದೆನು
ಸ್ವಾನುಭವದ ಸುಖವ ತೋರಿ ಸನ್ನೆಮಾಡಿ ಪೋದ ಸಖಿಯೆ ॥೧॥

ಹಂಸರೂಪನು ಎನ್ನ ಸಂಶಯವಳಿದನು
ವಂಶ ವಂಶ ಎತ್ತಿ ಬಂದ ಸಂಸಾರವನು ಕೆಡಿಸಿದವನ ॥೨॥

ಸತ್ತು ಚಿತ್ತು ನಿತ್ಯಾನಂದವು ಗೊತ್ತ ತೋರಿಯನ್ನತನ್ನ
ಭೃತ್ಯಳನ್ನು ಮಾಡಿಕೊಂಡ ಕರ್ತೃ ಸೋಮೆಕಟ್ಟಿಗುರುವ
ನಿತ್ಯದಲ್ಲಿ ಪಾಡು ಕಂಡೆಯ ॥೩॥

---

೨೧. ನಮೋ ನಮೋಯೆನುತಲಿ ನಮಿಸುತಲಿರ್ಪೆನು ಶಿವಶರಣ
ಪಾದಾಂಬುಜಕೆ ॥ಪ॥

ಕುರುವಿನುಪಾಧಿಯ ಪರಿದೆನ್ನ ಸಲಹಿದ। ಗುರುಶಾಂತವೀರ ನಡಿಗಳಿಗೆ
ಗುರುವಿನಗುರು ಪರಮಗುರುವು ತಾನುರುತರ ಗುರುಶಾಂತವೀರನಿಗೆ
ಮರೆವೆ ಒಲ್ಲರಿ ಮೂಲ ಕುರುಹು ಇಲ್ಲವೆ ಕಿತ್ತೂರು ಬೆತ್ತಲೆ ಆದಿವಾಳಾ
ರೂಢರಿಗೆ ॥೧॥



ಹೊಸವೆಂಟಿಸಳನ ಬಿಸರುಹದೊಳು ತಾ
ನೊಸೆದು ರಾಜಿಪ ಕರಿಯಾಖ್ಯನಿಗೆ
ಹಸುಳೆಯ ಶಿರದೊಳು ವಸುಧೆ ಭಾರವನಿಟ್ಟ ಸಮತಪೋರಾಜೇಂದ್ರನಿಗೆ
ಪಶುಪತಿಯವತಾರ ನಿಸುನಿರ್ವಾಣಹಾಂಗೆ ಸರ್ವೊತಪೋಭಿಧಾನನಿಗೆ ॥೨॥

ಗೊಲ್ಲರ ಹಳ್ಳಿಯೊಳುದಿಸಿದೆ ಶಿವಶರಣರ।
ಮೆಲ್ಲಡಿಗಳಿಗೆಯೆ ನಮಿಸುವೆನು
ಕನ್ನಡವಲ್ಲದೆ ಇನ್ನೇನರಿಯೆನು ಸೊಲ್ಲಿಸಿದೆನು ತೊದಳ್ನುಡಿಯೊಳಗೆ
ಬಲ್ಲ ಮಹಾತ್ಮರು ಇನ್ನೊಂದೆಣಿಸದೆ ಎಲ್ಲಾ ಸೋಮೆಕಟ್ಟಿ ಸ್ತುತಿಯೆ
ನುತ ॥೩॥

---

೨೨. ಸಾರಿ ಶಪಿಸುವೆ ನಿನ್ನನು।ತಪೋರಾಜ। ದೂರವಾದಿದೆಯ
ನ್ನನು ॥ಪ॥

ಪೊಡವಿಯೊಳಗೆ ನಾನು ಬಡವರ ಹುಡುಗನಂತೆ
ಗೊಡವೆಯಲ್ಲಡಗಿರೆ ಅಡವಿಗಿಕ್ಕಿದೆಯಾಗಿ ॥೧॥

ಮನವು ಮಹದೊಳಗಾಗಿ ತನುವು ಸೂರೋಗಲಿ
ಕುಲಛಲಮುಳುಗಲಿ ಕುತ್ಸಿತ ಹಾಳಾಗಲಿ ॥೨॥

ಮದಗಳು ಮುಳುಗಲಿ ಅರಿಗಳು ಹಾರಲಿ ಕರಣೇಂದ್ರಿಯಗಳು ಎಲ್ಲಾ
ಕಾಡಸೇರಲಿ ಗುರುವೆ ಅಳಲುತೀರದು ಎನ್ನಬಾಯ ಮಾತಿಂದೇನು ॥೩॥

ಹೋದ ಬಟ್ಟೆಯು ಬಳಿಕ ಬಾರದಂತಾಗಲಿ ನಾಮರೂಪಗಳಳಿದು
ಸೀಮೆ ಬಿಟ್ಹೋಗಲಿ
ಸೀಮೆ ಭೂಮಿಯ ಬಿಟ್ಟು ನಿಸ್ಸೀಮನಾಗಲಿ ಎಂದು ಸಾರಿ ಶಪಿಸುವೇ ॥೪॥

ಧೂಪವಗ್ನಿಯ ಕೂಡಿ ರೂಪಳಿದು ಹೋದಂತೆ ವಿರೂಪಸೋಮೆಕಟ್ಟಿ
ಪಾಪನಾಶನಪಾಡು ದೀಪಿಸಿರಲಿ ನಿನಗೆಂದೀಪರಿ ಶಪಿಸುವೆ ॥೫॥

---

೨೩. ಶಂಕರೆನ್ನನುಭವದ ಶಂಕೆ ಹರಿಸುವೆನೆಂದು।
ಕಿಂಕರನ ಮೇಲೆ ದಯೆ ಬಂದೀಗಳು॥
ಝೇಂಕರಿಸಿ ಮುಸುಕಿರ್ದ ತನುಮನಂಗಳ ಗುಣದ।
ಬಿಂಕಗಳ ಬಿಡಿಸಿದನು ವಚನ ಮಾತ್ರದಲಿ ॥ಪ॥

ತಪವಿದ್ಯೆ ವಿರತಿಸುಖ ಅಪರೋಕ್ಷಜ್ಞಾನ ಬಲು ಗು।
ಪಿತ ರಹಸ್ಯಗಳ ನರುಪಲೆಂದು॥
ಜಪಮೂರ್ತಿ ಜಗದೊಡೆಯರಾಕಾರದಲಿ
ತಪಸ್ಸಿದ್ಧಿಯಾಂತ ಶಿಷ್ಯರ ನೋಳದಿ ॥೧॥

ವಿಘ್ನಂಗಳೇನಿರದೆ ಭಗ್ನವಾಗಲಿ ಮನವು।
ಮಗ್ನವಾಗಿರಲಿ ಮನ ತನ್ನೊಳೊಂದಿ॥
ಸುಜ್ಞಾನವಿಂತಿರಲಿ ಎಂಬ ಕರುಣದ ಪದ್ಯ।
ಪ್ರಜ್ಞೆಗೊಳಿಸಿತು ಯೆನಗೆ ಕರ್ತನಹುದೆಂದು ॥೨॥

ರಮ್ಯತರವಾದ ನಿಗಮಾಂತ್ಯ ಮಾರ್ಗಂಗಳೊಳು।
ಸೌಮ್ಯ ಸದ್ಗುಣ ಗಣ ಶಿವಾನುಭವದ॥
ಪೇರ್ಮೆಯಿಂತೆಂದೆನ್ನ ನಿರ್ಮಲನ ಮಾಡಿದರು।
ನಿಮ್ಮ ಬರವ ಹಾರೈಪ ತವಕವೆಡೆಬಿಡದು ॥೩॥

ದೇವ ನೀ ಕೃಪೆಯಿಂದ ಪಾವನನ ಮಾಡಿದರೂ।
ಯಾವಾಗ ದರುಶನವು ಎಂತೆಲ್ಲಿ ತನಕ ॥
ಭೂವಳಯ ಜಂಜಡದ ದೇಹ ಬೇರಿರಲೆನಗೆ ।
ಧಾವತಿಯು ತೋರುತಿದೆ ಪಾವನಾತ್ಮಕನೆ ॥೪॥

ಸಿಲುಕಿಹೆನು ತಪ್ಪದದ ತ್ವಂಪದದ ಸಾಧ್ಯದಲಿ।
ಬಲು ಸುಖದ ಸುಗ್ಗಿ ಚಿತ್ಸುಖವರಿಯದೆ ॥
ನೆಲೆಯಾದ ಭಾವದೊಳು ಬೆರಸಿ ಬೇರಾಗದ।
ಉಳುಮೆ ಲೀನಂಗೊಳಿಸಿ ಪೊರೆವನೆಂದು ॥೫॥

ಕೇಳಿ ನೋಡುವ ತನಕ ಮೀರಿ ಗೀಳಿನೊಳಿರ್ಪ।
ದೇಳಿಗೆಯದೆಂತುಟ್ಟೈ ನಿಮ್ಮ ಕರುಣ॥



ಮೇಳನದ ಮೇಲೆ ಮತ್ತೇನುಂಟು ತಿಳಿವನದ ಅದ।
ರೊಳಗವದೇನಿಹುದೊ ಕೇಳುವೆನು ನಾನು ॥೬॥

ದ್ರವಿಡ ಮಂಡೂಕ ನ್ಯಾಯದಂತಿರ್ದ।
ಕಾಲಗತಿಗಳಿಗೆನ್ನ ಬೇರಿರಿಸಿ ಕವಿವ ಕರ್ಮಗಳ॥
ಭವಣೆಯೊಳು ಸಿಲ್ಕಿಸದೆ ಸನೆಯದಾನಂದ ಸುಧೆಯು।
ಸವಿದೆನಗೊಲಿದಿತ್ತೆ ವಚನಾನುಭವದಿ ॥೭॥

ಸ್ವಾನುಭವ ಸುಜ್ಞಾನ ಮೌನ ಮುದ್ರೇಲಿ ನಿಂದು।
ತಾನು ನೀನೆಂಬ ಭಾವವು ತೋರದೆ॥
ಭಾನುಕೋಟಿಯ ತೇಜ ಪೂರ್ಣದೊಡವೆರಸುವೊಡೆ।
ನೀನಲ್ಲದಾರುಂಟು ಸೂಸುಮೋಹದಲಿ ॥೮॥

ಮಿಕ್ಕ ಬಹುಸಾಧನದ ಪೆಕ್ಕಸಗಳಲಬಿರಲಿ
ತಕ್ಕ ಈ ಪದ್ಯದ ಮೊದಲಾಗುವ
ಅಕ್ಕರದ ಮೂರುತಿಯೊಳಿಕ್ಕಿ ತನುಮನವೆಲ್ಲ
ಗಕ್ಕನೊಡೆವೆರೆಯುವುದು ಕಕ್ಕುಲಿಂದೆನಗೆ ॥೯॥

ನಂಬಿಹೆನು ಸತತ ನಿನ್ನ ಹಂಬಲೆಡೆಬಿಡದೆನಗೆ
ಕುಂಭಿನಿಯೊಳು ಸೋಮೆಕಟ್ಟೆಚರದ
ಸಂಭ್ರಮವದಂತಿರಲಿ ಶಂಭುರೂಪನೆ ತವ
ಪದಾಂಬುಜವ ಎನ್ನ ಹೃದಯಾಂಬುಜದಿ ನಿಲಿಸೈ

---

೨೪. ನುತಿಸುವೆನನುದಿನ ಶಶಿಕಂಠನ ಸಮವೆಸೆವ ಜ್ವಲಕಂಠಾಗ್ರಣಿಯ
ಅತಿಶಯ ಪಾದದ ಬಿಸರುಹಕ್ಕೊಂದಿಸೆ ಗತಿಗೊಡುವಗಣಿತನಾದವನ ॥ಪ॥
ಸತ್ತು ಚಿತ್ತು ಆನಂದದ ಬೋಧವು ನಿತ್ಯವಾಗಿ ಶಾಂತಿಯನ್ನೈದಿ
ಮೃತ್ಯುಮಾಯೆ ಜಗವೆಲ್ಲವ ಗೆಲಿದುರೆ ನಿತ್ಯವಾದ ವೀರತ್ವದಲ್ಲಿ
ಆರ್ತರಾದ ಸದ್ಭಕ್ತರ ಪಾಲಿಸುತಿತ್ತುವವರ ತಾನರ್ಥಿಯಲಿ
ಕರ್ತನಾದವೀ ಪೃಥ್ವಿಯಲ್ಲಿ ಒಪ್ಪಿತ್ತು ಮತ್ತೆಯು ಶಾಂತವೀರಾಖ್ಯನಲ್ಲಿ ।೧।

ಕೋಪರಹಿತ ತಪಸ್ಸಿದ್ಧಿಯೊಳಗೆ ಜಗಪಾಪಗಳ್ಹರಿಸುವ ಶಕ್ತಿಯುಳಿ
ಓಪ ಗುರುವಿನಾಜ್ಞೆಯನೆಡಬಿಡದಲಿ ಈ ತಪೋರಾಜಭಿಧಾನದಲಿ
ಈಪರಿಯಿಂದಲಿ ರೂಪು ದಳೆದು ಜಗದೀಪಕನೆನೆಸಿವ ಭೂವಳಯದಲಿ
ಪಾಪವ ಹರಿಸುವ ತುಂಗಭದ್ರ ತಟದಾಪುರಹರಿ ಹರನಾಮದಲಿ ॥೨॥

ಬಸವನ ಭಕ್ತಿಯು ಬಿಸರುಹ ಜಾಂಡದಿ ಹೊಸದಾಗಿಯೆ ತೋರಲಿಕ್ಕೆಂದು
ಪಶುಪತಿ ರೂಪಿನ ಪರಸೇವೆಯೊಳಗೆ ಬಹು ಕುಶಲತ್ವವ ತಾ ಕೈಕೊಂಡು
ಮುಸುಳಿಸಿದಂಥ ಸುಖವು ಸಾಧ್ಯವಿರೆ ಘಸಣಿಜಗ ಕರೆಕರೆ ಯೆಂದು
ಅಸಮವಾಗಿಯೆ ಭಕ್ತರೊಳಗೆ ಬಹು ಜಸವೆತ್ತಿಸೆವ ಕರಿವರನೆಂದು ॥೩॥

ಈ ಮಹಾಗುರುಶಿಷ್ಯರ ಈ ಪದ್ಯದಿ ಪ್ರೇಮದಿ ಪೊಗಳಿದೆವಾವಿಂದು
ತಾಮಸ ಗುಣಗಣವಳಿದುರೆ ಸತ್ವನಿರಾಮಯನೊಳು ಬೆರಸುವರೆಂದು
ಸೋಮೆಕಟ್ಟಿ ಚರವರನಿಗೆ ನಿಸ್ಸೀಮ ಭಕ್ತಿ ಇದು ಬೇಕೆಂದು
ಕಾಮಿಸಿ ನಿಮ್ಮನು ಬೇಡುವೆ ಭವವ ವಿರಾಮವ ಮಾಡಿರಿ ನಮಗೆಂದು ॥೪॥

---

೨೫. ಸೋಮೆಕಟ್ಟಿ ಈಶ ತಾಮಸದ ಮನ ನಾಶ
ಸ್ವಾಮಿ ಭಜಿಸುವ ಶರಣ ಹೃದಯವಾಸ ॥ಪ॥

ಕಾಮಕಾಲರ ಪುರವ ಕಾಯಿಸಿದೆ ಕಾಯವನು
ವ್ಯೋಮ ಅಂತರದಲ್ಲಿ ಇರ್ಪೆಯಲ್ಲಾ
ಆ ಮಹಾ ಸೋಮಸೂರ್ಯಂ ಮನ್ಮನೆಯೊಳಿರುತಿರ್ದ ಕಾರಣದಿ
ಸೋಮೆಕಟ್ಟಿಯು ಈಶನಾದೆ ॥೧॥

ಅಷ್ಟತನು ಪಟ್ಟಣದಿ ಅಷ್ಟ ಚಕ್ರವ ಮಾಡಿ।
ಅಷ್ಟ ಮೂರ್ತಿಯು ನೀನೆ ಆಗಿ ಇರ್ದು॥
ಶಿಷ್ಯ ಭಕ್ತರ ನೋಡಿ ಭ್ರಷ್ಟ ಮನವನು ಕೆಡಿಸಿ।
ಇಷ್ಟಾರ್ಥಗಳನಿತ್ತ ಶ್ರೇಷ್ಠ ಗುರುವರನೆ ॥೨॥



ನವವಿಧದ ಭಕ್ತಿಯನು ಸವಿಸವಿದು ನೋಡುತ್ತ
ಭವವ ಕೆಡಿಸುವೆನೆಂದು ತವೆ ಹರುಷದಿ॥
ನವಿಲಗಿರಿ ತೆರದೊಳಹ ತ್ರಿವಿಧ ಮಂಡಲದಲ್ಲಿ
ಭುವಿಗೆ ಸಾಕ್ಷಿಗನಾದ ಪರಮಹಂಸ ॥೩॥

---

೨೬. ಶರಣು ಸೋಮೆಕಟ್ಟಿಯೀಶ ಅನು ಪರಿಭವಯುತನೆಲೆ
ಕರಿವೃಷಭೇಶ ಶರಣು ಸೋಮೇಕಟ್ಟಿಯೀಶ ॥ಪ॥

ಬರಲಾರೆ ಸರ್ವಯೋನಿಯೊಳು ಬಂದು ತಿರುಗಲಾರೆನು
ಯಮಪುರದ ದಾರಿಯೊಳು।
ಕೊರಗಲಾರೆನು ಸಂಸೃತಿಯೊಳು ಮೂರು ತೆರನಾದ ಮಲ
ದೊಳಗೆ ಇರಲಾರೆ ನಿನ್ನ ॥೧॥

ಆರು ಮೂರರೊಳಾಡಲಾರೆ ಮತ್ತೀರೈದು ಇಂದ್ರಿಯದೋ
ಳ್ತಿನಿಸಿಕೊಳಲಾರೆ॥
ಮೂರು ತಾಪದೋಳ್ ಬೇಯಲಾರೆ ತೋರುವೆರಡು ಕರಿಯೊ
ಳು ಮುರಿಸಿಕೊಳಲಾರೆ ॥೨॥

ಮೂರಾರು ಭಕ್ತಿಯ ಮಾಡಿ ಆದ ಮೀರಿ ಮೂರರೊಳಿನ್ನು।
ಮೇಲಕ್ಕೆ ಹಾರಿ।
ಸಾರಿ ಉನ್ಮನೆಯೊಳು ತೂರಿ ನಿನ್ನ ಸೇರಿ ಪೂಜೆಯ ಮಾಳ್ಪ ಧೀರತ್ವತೋರಿ ॥೩॥

---

೨೭ ಆವ ಮೃಗವೋ ಕಾಣೆ ಹಾರಿತು ಗಗನಕ್ಕೆ ಮೀರಿದ ಶಬ್ದವಲ್ಲಾ
ಗುತಿದೆ
ಸಾರಿನೋಡಲು ಸರ್ವ ಜಗಯೆಲ್ಲವೊಳಕೊಂಡ ಧೀರತ್ವವನು ತಾನೆ ಬೀರು
ತಿದೆ ॥ಪ॥

ಮಲವ ಸಂಕೋಚವನು ಕಳೆದು ಲಿಂಗತ್ರಯವ ।
ನೆಲೆಗೊಳಿಸಿ ನಿರ್ಮಲನ ಮಾಡಿದುದರಿಂದ ॥೧॥

ಪಶುವಿನಂಗದ ಘೃತವು ಪಶುವಿನಿಂ ಪೊರಮಟ್ಟು ।
ಪಶುವಿನಂಗದ ರುಜೆಯು ಕೆಡಿಸುವಂತೆ ॥
ದಶವಿಧದ ಕಲೆಬಿಂದುನಾದ ವೊಂದಾಗಿರ್ದ ।
ಅಸಮ ಪ್ರಸಾದವೆಂತೆಂಬ ಮುಖದಿಂದ ॥೨॥

ಧರೆಯು ಪಾವನವ ಮಾಡುವರೆ ಸೋಮೆಕಟ್ಟೆ ।
ಕರಿವೃಷಭಯೋಗೀಂದ್ರನವತಾರದಿಂ ॥
ಪರಶಿವನೆ ತಾ ಬಂದು ಶಾಂತವೀರನ ಮೇಲೆ ।
ಪರಿಪೂರ್ಣ ಭಾವದೊಳು ಪಾಲಿಸಿದ್ದರಿಂದ ॥೩॥

---

೩೧. ಹಾದರವ ನಾನರಿಯದಿದ್ದೆ ।
ಸಿದ್ಧಪುರುಷರ ಕಣ್ಣಲ್ಲಿ ನೋಡದಿದ್ದೆ ॥ಪ॥

ಒಡಲೆ ನಾನೆಂತೆಂದು ನಂಬಿಕೊಂಡಿದ್ದೆ ।
ನೋಡದೆ ಮೂರು ಮುದ್ದೆಯುಂಡುಕೊಂಡಿದ್ದೆ ॥೧॥

ಏಳು ಬಗೆಯ ಅಕ್ಕಿಯನ್ನ ಉಣ್ಣುತಿದ್ದೆ ।
ಏಳೊಂದು ಬಗೆಯೂರಗಾಯ ನಂಬಿದ್ದೆ ॥
ಮೇಲಾದ ದಶಭಕ್ಷ್ಯ ಸವಿಯುತಲಿದ್ದೆ
ಒಳ್ಳೆ ತ್ರಿಬಗೆ ತುಪ್ಪ ಉಂಡುಕೊಂಡಿದ್ದೆ ॥೨॥

ಮಾರಿಯ ತೆರದೊಳು ಮಲೆತುಕೊಂಡಿದ್ದೆ ।
ನಾರಿಯರೊಳಗೆಲ್ಲ ನಲಿಯದೆ ಇದ್ದೆ ॥
ಜಾರು ಪುರುಷರ ಬಳಿಗೆ ಚರಿಸದೆ ಇದ್ದೆ ।
ಧಾರುಣಿಯೊಳು ನಾನೆ ಧೀರಳೆನುತಿದ್ದೆ ॥೩॥

ಗಂಡುಳ್ಳ ಮಹಾದೇವಿ ಸಂಗವ ಮಾಡಿ ।
ಕಂಡಿಯಿಲ್ಲದ ಮಾನಭಂಗವ ಮಾಡಿ ।



ಚಂಡಪ್ರಕಾಶನ ಮನೆಯನ್ನು ಕೂಡಿ ।
ತಂಡ ವಿಕ್ರಮವಾದ ವ್ರತಭಂಗ ಮಾಡಿ ॥೪॥

ಆರೂ ಇಲ್ಲದ ಮನೆಗೆ ಕರೆದ ।
ಬೇರೆ ಮುಸುಕಿರ್ದ ಕುಪ್ಪಸವ ತಾನಳಿದ ॥
ಗುರು ಕುಚವೆರಡನು ಜಾಗ್ರದಿ ಪಿಡಿದ ।
ಭರದಿಂದ ಕುಚಮಧ್ಯದೊಳು ತಾ ನಲಿದ ॥೫॥

ಆಗ ಮೋಹವು ತನಗೆ ಹೆಚ್ಚಿ ।
ಬೇಗ ತಾ ಬಂದು ಉಟ್ಟಿದ್ದ ಸೀರೆಯ ಬಿಚ್ಚಿ ॥
ಹಿಗ್ಗುತ ಮುಡದೊಳು ಅಧರವ ಕಚ್ಚಿ ।
ತಗ್ಗದೆನ್ನಯ ರತಿಗೆ ವಿಟನಾಗ ಮೆಚ್ಚಿ ॥೬॥

ಆರು ವರಹದ ಓಲೆ ಕೊಟ್ಟ ಬೇರೆ ।
ಮೂರು ವರಹ ತೂಕದ ಮೂಗುತಿ ಇಟ್ಟ ॥
ಪರಂಜ್ಯೋತಿಯಂಥ ರತ್ನ ಮಡಗೆಂದು ಕೊಟ್ಟ ।
ಗುರು ಸೋಮೆಕಟ್ಟೇಶ ಭಜಿಸೆಂದು ಬಿಟ್ಟ ॥೭॥

---

೩೨ ಯಾಕೆ ನಿನಗಕಟ ವೈರಾಗ್ಯ ಜನಿಸದು ಮುನ್ನ
ಶೋಕ ಜನ್ಮಗಳಿನ್ನು ಸಾಕಿಲ್ಲವೆ ॥ಪ॥

ಹಿಂದೆ ಜನ್ಮಗಳೊಳಗೆ ಹೊಂದಿರ್ದ ಸತಿ ಸುತರು
ಬಂಧು ಬಳಗಗಳು ಏನಾದರು
ತಂದೆ ತಾಯಿಗಳೆಲ್ಲ ಹೊಂದಿ ಕಳುಹಿದರಿಂತು
ಚಂದದಲಿ ನಿನ ಹಿಂದೆ ಬಂದಿರ್ಪರೆ ॥೧॥

ನಾಳೆಗಿರಬೇಕೆಂದು ಮೋಹದಲಿ ಮಡಗುತ್ತ
ಬಾಳುವೆಯ ನೀ ಮಾಡುತಿರ್ಪೆ
ಮೂಳನಂದದಿ ಹಿಂದೆ ಹೂಳಿರ್ದ ಧನ ಕನಕ
ಮೇಳನದಿ ನಿನ ಹಿಂದೆ ಬಂದಿರ್ಪುದೆ ॥೨॥

ಶರೀರ ನಾನೆನ್ನುತಲಿ ಪರಿಪರಿಯೆ ತೊಳೆದು
ಪರಿಮಳಾಂಬರವನ್ನು ಧರಿಸುತ್ತಲಿರುವೆ
ಮರುಳುತನದಿಂ ಮೊದಲು ಪೋಷಿಸಿದ ದೇಹಗಳು
ತೆರಳಿ ನಿನ್ನ ಹಿಂದೆ ಬಂದಿರ್ಪುವೆ ॥೩॥

ಮತ ದೇವರೆಂದೆಂಬು ಪ್ರತಿಮೆಗಳ ಪೂಜಿಸುತ
ಗತಿಯು ನೀನೆಂತೆಂಬು ನಂಬಿ ಇರುವೆ
ಗತವಾದ ಜನ್ಮಗಳ ತಿಮ್ಮಬೊಮ್ಮಪ್ಪಗಳು
ಹಿತದಿಂದ ನಿನ್ನೊಡನೆ ಬಂದಿರ್ಪುವೆ ॥೪॥

ಜಾತಿಘನವೆಂತೆಂಬ ನೀತಿಯಲಿ ನೀನಿರುತ
ಸೂತಕಾದಿಗಳಿಂಗೆ ಬೆದರುತಿರುವೆ
ಮಾತೆ ರಜದೊಳು ನೀನು ಸೂತಕದಿ ಬೆಳೆವಾಗ
ಜಾತಿಸೂತಕಗಳೆಲ್ಲಿದ್ದುವು ॥೫॥

ಸಂತ ಸಂದಲಿ ಅನಿತು ಸಂಸಾರವ ನೀ ಮಾಡಿ
ಇಂತು ಸುಖ ಕಿಂಚಿತ್ತು ದೊರೆಯಲಿಲ್ಲ
ಮುಂದೆ ಭ್ರಾಂತನು ಬಿಟ್ಟು ಚಿಂತೆಯನು ನೀನರಿದು।
ಅಂತಕಾಂತಕನ ನೀ ಹೊಂದಿ ಸುಖಿಸದಲೆ ॥೬॥

ಸಾಧುಗುಣವನು ಧರಿಸಿ ಕ್ರೋಧವನು ನೀ ಮುರಿದು।
ವೇದಾಂತದರ್ಥವನು ಬೇಗನರಿತು ॥
ಆದಿ ಅಂತ್ಯವ ತಿಳಿದು ಭೇದವನು ನೀ ಮರೆದು ।
ಬೋಧೆಯನು ಸಮನಿಸಲು ಮೋಕ್ಷವಹುದು ॥೭॥

ಆರು ನಾನೆಂಬೆಂಬ ವಿಚಾರವನು ಮಾಡಿ !
ಚಾರು ಸಖರೊಡನೆ ಕೂಡುತಿರಲು ॥
ಮೀರಿದಾ ಗುರುವಿಂದಲನುಭವವ ನೀ ತಿಳಿದು ।
ಘೋರೆಂಬ ನಾದದೊಳು ಬೆರೆಯೆ ಸುಖವಹುದು ॥೮॥

ಜಂಗಮಾರ್ಚನೆ ಮಾಡಿ ಲಿಂಗದೊಳು ಒಡಗೂಡಿ
ಮಂಗ ಮನವನು ಬೇಗ ಹಿಡಿದು ನಿಲಿಸಿ ॥



ತುಂಗ ಸೋಮೆಕಟ್ಟಿ ಕರಿವೃಷಭನಡಿವಿಡಿದು ।
ಭಂಗವನು ಕಳೆಯೆ ಸುಖವಹುದು ಮನುಜ ॥೯॥

---

೨೨. ಯಾಕಿನ್ನು ಬಳಲಿಸುವೆ ಭವದ ಶರಧಿಯೊಳೆನ್ನ।
ಸಾಕು ಮಾಡಿನ್ನ ಭವ ನೂಕಲಾರೆ ॥ಪ॥

ನಾನಾ ಜನ್ಮದಿ ಬಂದು ನಾನಾವಸ್ಥೆಯಲಿ ಬೆಂದು।
ನಾನಾ ಆಹಾರಗಳ ನಲಿದುಂಡೆನು॥
ಹೀನ ಕರ್ಮಗಳಿಂದ "ನಾನತ್ವ" ಪಡೆಗೊಂಡು।
ಶುನಿಯು ತಲೆ ಹುಳಿತಂತೆ ತಿರುಗುತಿರ್ಪೆ ॥೧॥

ಸ್ವರ್ಗ ಸುಖವನು ಪಡೆದು ಭರ್ಗನನು ನಾ ಮರೆದು।
ದುರ್ಗುಣದ ಸಂಕುಲದಿ ಎಡೆಯಾಡುತ॥
ಆಗ ಪಿತ ಮಲದಿಂದ ಬೇಗ ಮಾಯ್ಮಲದೊಳು ಕೂಡಿ।
ಬೇಗೆಯನು ಪಡಲಾರೆನೋ ಶಿವನೆ ॥೨॥

ಮಾತೆ ಸೂತಕ ಬಲಿತು ರೋತೆ ಮಲದೊಳು ಹೊರಳಿ।
ಜಾತಕೀಟಕಗಳಿಂದ ನರಳುತಿರಲು॥
ಖತಿಯಿಂದಲಿ ಸೂತಿ ವಾಯುವುಪಟಳದಿಂದ।
ಮಾತೆ ಭಗದೊಳು ನಾನು ಬರಲಾರೆನೋ ಶಿವನೆ ॥೩॥

ಧರಣಿಯೊಳು ಉದ್ಭವಿಸಿ ಸ್ಮರಣೆ ಯೆಂಬುದು ಪೋಗಿ।
ತರುಣಿಯರು ಸೂಡೆನ್ನ ಹಾಕುತಿಹರು॥
ಮರವೆ ಗಾಳಿಯು ಬೀಸಿ ಭರದಿ ರೋಗಗಳ್ ಬಂದು।
ಶರೀರ ಬಾಧೆಗಳಿಂದ ನರಳಲಾರೆ ॥೪॥

ಬಾಲಾವಸ್ಥೆಯು ಎಂಬ ಹದಿನಾರು ವತ್ಸರವು।
ಕಾಲವನು ಕಳೆಯುತ್ತ ತಿರುಗುತಿರಲು॥
ಮೇಲೆ ಯೌವನ ಬಂದು ಸಲ್ಲೀಲೆ ಸತಿಗೂಡಿ।
ಬಲು ಮೋಹದಲಿ ನಾ ಬಳಲಲಾರೆ ॥೫॥

ವರುಷ ನಾಲ್ವತ್ತರಲಿ ವೃದ್ಧಾಪ್ಯ ತೋರಿ।
ಸಿರಿ ಪೋಗಿ ಬಡತನವು ಒದಗುತಿರೆ॥
ಕರದಿ ದಂಡವ ಪಿಡಿದು ಜ್ವರ ಕೆಮ್ಮು ಉಬ್ಬಸವು।
ಭರವಾದ ರೋಗದಲಿ ಬಳಲಲಾರೆ ॥೬॥

ಈ ನೇರಿ ಇರುವಾಗ ಯಮ ಭಟರು ತಾ ಬಂದು।
ಭಾಮೆಗೆ ಹೇಳದ ತೆರದಿ ಎಳೆಯುತಿರಲು॥
ಕಾಮಹರ ನಿಮ್ಮಡಿಯ ಪ್ರೇಮ ಮರೆಯಹುದೆಂದು।
ಸೋಮೆಕಟ್ಟಿ ಈಶನ ಮರೆಹೊಕ್ಕೆನು ॥೭॥

---

೩೪. ಏತರ ಭಯವಣ್ಣ ನಮಗಿ।
ಆತ ಶ್ರೀಗುರು ಕರುಣದಿ ಕರೆದು ॥
ನ್ನೇತರ ಭಯವಣ್ಣ।
ಜ್ಯೋತಿ ಲಿಂಗವ ಕರದೊಳಗಿಟ್ಟನು ॥ಪ॥

ಕಾಮನ ಗೆದ್ದವ ಕರದೊಳಗಿರುತಿರೆ।
ಕಾಮಿನಿ ಭಯಗಳು ನಮಗೇಕೆ ॥
ಸೋಮಧರನು ಎನ್ನ ಪ್ರೇಮದಿ ನೋಡಲು
ಆ ಮಹಾಕಾಲನ ಭಯವೇಕೆ ॥೧॥

ಧರೆಯ ಜನರು ಎಲ್ಲಾ ಪೂಜಿಪ।
ಪರಿಪರಿ ಕಲ್ಲಲ್ಲ ಗುಮಥದಿಂದಲಿ ॥
ಕರತಳಾಮಲಕದ ಪರಿಯಂತೆ।
ಕರದೊಳು ಕಾಣಿಸಿತಲ್ಲಾ ॥೨॥

ಜಾತಿಧರ್ಮದಿಂದ ಪೂಜಿಸ।
ಪ್ರೀತಿಯ ಲಿಂಗಲ್ಲಾ॥
ಜೋತಿಮಯನು ಜಗದೊಳಹೊರಗಿರುತಿಹ।
ಆತ ಬ್ರಹ್ಮವೇ ತಾನಿರ್ದಬಳಿಕ ॥೩॥

ದೊಡ್ಡ ಗುರುವೆ ಸೇರಿ ಅವಗುಣ।
ಗೊಡ್ಡು ಗುರಿಯ ಮಾಡಿ ॥
ಅಡ್ಡಗುಡ್ಡದ ನಟ್ಟನಡುವೆಯು।
ದೊಡ್ಡ ಗುಹೆಯೊಳು ಸೇರಿದ ಮೇಲೆ ॥೪॥



ದ್ವಾರ ನಾಲ್ಕು ಕೂಡಿ ಇರುತಿಹ।
ದ್ವಾರದ ಮಧ್ಯದೊಳು॥
ಧೀರ ಸೋಮೆಕಟ್ಟಿ ಗುರುಯತಿರಾಜನು।
ಪಾರಮಾರ್ಥನ ಮಾಡಿದ ಮೇಲೆ ॥೫॥

---

೩೫. ಶ್ರೀಗುರು ಪೂಜೆಯ ಮಾಡಿದೆ ತಾಗುವ ಭವವನು ನೀಗಿದೆ।
ಯೋಗವು ಆಗಿ ಭೋಗಲಿಂಗದೊಳ್ ಕೂಡಿದೆ ॥ಪ॥

ಮೂರಾರು ಭಕ್ತಿಯ ಮಾಡಿದೆ। ಸಾರಿ ಉನ್ಮನೆಯೊಳು ತೂರಿದೆ॥
ಮೂರು ನದಿಯ ಸ್ನಾನ ಮಾಡಿದೆ। ಈರೈದು ನಾದವ ಕೇಳಿದೆ ॥೧॥

ಆರು ಬಾಗಿಲ ಮುಚ್ಚಿ ನೋಡಿದೆ। ತೋರುವ ಕಳೆಯೊಳು ಕೂಡಿದೆ॥
ಮೂರು ಮುದ್ರೆಗಳೊಳಾಡುತ ಬೇಗದಿ। ಮೂರೊಂದು ಯೋಗವ ಮಾಡಿದೆ॥೨॥

ಸಾಸಿರದಳ ಪೀಠವೇರಿದೆ। ನಾಸಿಕ ತುದಿಯನು ಸೇರಿದೆ॥
ಸೂಸುವ ವಾಯು ಮನ ದೃಷ್ಟಿಯು ಕೂಡಿ। ಭಾಸುರ ಲಿಂಗವ ಕೂಡಿದೆ ॥೩॥

ತಳಮೇಲು ಚಕ್ರವ ನೋಡಿದೆ। ದಳಗಳು ಎಂಟನು ಕೂಡಿದೆ॥
ಥಳ ಥಳಿಸುವ ನಾಗ ನೇರಿದೆ। ಕಳೆಯುಳ್ಳ ಜ್ಯೋತಿಯ ಸೇರಿದೆ ॥೪॥

ನಾಲ್ಕು ಹಾದಿಯ ಮಧ್ಯೆ ತೂರಿದೆ। ನಾಲ್ಕೊಂದು ತತ್ವವ ನೀಗಿದೆ॥
ಸಿಲುಕನಳಿದ ಸೋಮೆಕಟ್ಟೆ ಗುರುವ ಸೇರಿ। ನಾಲ್ಕೊಂದು ಮುಖದೊಳು
ನಲಿದಾಡಿದೆ ॥೫॥

---

೩೬. ಬ್ರಹ್ಮವಾಗುವೆವೆಂದು ಬಳಲುವರು ಜಗವೆಲ್ಲ।
ಬ್ರಹ್ಮವಿಲ್ಲದೆ ಜಗದೊಳನ್ಯವಿಲ್ಲ ॥ಪ॥

ವಾರಿಯೊಳು ವಾರಿ ತಾ ಕೂಡುವಂತೆ।
ಪರಮನೊಳು ಜೀವ ತಾ ಲಯಿಪನೆನಲು ॥
ವಾರಿ ವಾರಿಗೆ ಭೇದವಿಲ್ಲವಾ ಪರಿಯಂತೆ॥
ಪರಮನಿಗೂ ಜೀವನಿಗೂ ಭೇದ ಮುನ್ನಿಲ್ಲಾ ॥೧॥

ಘಟ ಮಠದ ಬಯಲೆಲ್ಲ ಒಟ್ಟು ಗೂಡುವೆನೆಂದು।
ಥಟ್ಟನೆ ಬಳ್ಳವನು ತಾ ಯೆಂಬೋಲು॥
ಸೃಷ್ಟಿ ಹೊರಗೊಳಗೆಲ್ಲ ಒಟ್ಟಾದ ಬಳಕಿನ್ನು।
ದಿಟ್ಟ ಮುಕ್ತಿಯು ಎಡೆಗಳಿಲ್ಲದುಂಟೆ ॥೨॥

ತನ್ನ ತಾನೇ ಪಿಡಿದು ಸುರಲೋಕಕ್ಹಾರೆಂದು।
ಬನ್ನಬಡುತಿರ್ಪ ಮಾನವನಂದದಿ ॥
ಅನ್ಯವಿಲ್ಲದೆ ಪೂರ್ಣದಿರವೆ ನೀನಾಗಿನ್ನು।
ನಿನ್ನ ಬೇರೆಲ್ಲಿ ತರುತಿಹೆ ಇದನು ಪೇಳ್ಳೈ ॥೩॥

ಜಗಭರಿತ ಬಂದ ಜಾಗ್ರತೆ ಕದವ ತೆಗೆ ಯೆನಲು।
ಜಗಭರಿತ ನಾದವನು ಒಳಗಿಲ್ಲವೆ॥
ಜಗದೇಕ ಬ್ರಹ್ಮವಾಗುವೆನೆನಲು।
ನೀನೀಗ ಜಗದ ಏಕತ್ವದೊಳೆ ಜನಿಸಿರ್ಪೆ ತಿಳಿಯೈ ॥೪॥

ಕಪ್ಪು ಹಚ್ಚಿ ದರ್ಪಣವ ನೋಡಲು ।
ಕಪ್ಪು ಬಿಳುಪದು ಮುಖವು ಕಾಣಲಿಲ್ಲ॥
ಒಪ್ಪದಿಂ ಬೆಳಗಲಲಿರ್ಪ ಜೀವನ ಗುಣವು।
ಸೊಪ್ಪಳಿದು ಸೋಮೆಕಟ್ಟೆ ಈಶನಾದೆ ॥೫॥

---

೩೭. ಗುರುಪುತ್ರರನು ಕಂಡು ನರರ ಮಾತುಗಳನು ಆಡಬಾರದು
ಧರೆಯೊಳಗಿರುತಿಹ ತರು ಗುಲ್ಮ ಕಲ್ಲಿಗೆ ಎರಗಬಾರದು ॥ಪ॥

ನರನಾಗಿ ಜನಿಸಲು ಗುರುವನು ಸೇರದೆ ಇರಲು ಬಾರದು ॥
ಗುರುಕರುಣವಿಲ್ಲದೆ ಬರಿಯ ತಪಗಳ ಮಾಡಬಾರದು ॥೧॥

ಮೋಕ್ಷದಪೇಕ್ಷೆಯಲಿ ಮರಳುತ್ತ ಹಿಮ್ಮೆಟ್ಟಿ ನಿಲ್ಲಬಾರದು ।
ರಾಕ್ಷಸನಂದದಿ ಭಕ್ಷ್ಯಾದಿಗಳ ನೋಡಿ ಬಯಸಬಾರದು ॥೨॥

ಹೆಣ್ಣು ಹೊನ್ನು ಮಣ್ಣು ಮೂರನ್ನು ಮನದೊಳು ಕಚ್ಚಬಾರದು
ಹುಣ್ಣಿಮೆ ಚಂದ್ರನ ಹಾಂಗೆ ಹೊಳೆಯುವ ಹೆಣ್ಣನು ನೋಡಬಾರದು ॥೩॥



ಅರಿಷಡ್ವರ್ಗಂಗಳ ಉರುಳಿನೊಳಗೆ ಸಿಕ್ಕಿ ಸಾಯಬಾರದು ।
ದುರುಳ ಪಂಚೇಂದ್ರಿಯದಿರವಿನೊಳಗೆ ಮನ ಸಿಕ್ಕಬಾರದು ॥೪॥

ಬೋಧವು ಇಲ್ಲದೆ ವೇದವನೋದಬಾರದು ।
ಮೋದದಿ ದಶನಾದ ಕಿವಿಯೊಳು ಕೇಳದಿರಬಾರದು ॥೫॥

ಸಾಧಿಸಿ ಗುರುವನು ಮನದೊಳು ಸ್ಮರಿಸದೆ ಇರಲು ಬಾರದು ।
ಗಾದೆಯ ಮಾತಿಲಿ ವೇದಾಂತಿಗಳ ಕೂಡೆ ವಾದಿಸಬಾರದು ॥೬॥

ಸಾಧನೆಯಿಲ್ಲದೆ ಬರಿಯ ವೈರಾಗ್ಯವನಾಡಬಾರದು ।
ಓದಿದ ಅರ್ಥವು ತಿಳಿಯದೆ ಬಾಯೊಳು ಬೊಗಳಬಾರದು ॥೭॥

ಬರಿಯ ಸತ್ಕರ್ಮದಿ ಮನವನು ಇಕ್ಕುತ ಸಾಯಬಾರದು ।
ತಿರುಗಿ ತಿರುಗಿ ಯಮಪುರದೊಳು ಕೊರಗುತ ಇರಲಿ ಬಾರದು ॥೮॥

ಸೋಮೆಕಟ್ಟೆ ಈಶ ಸ್ವಾಮಿಯ ಪಾದವ ಮರೆಯಬಾರದು ।
ನಾಮ ವಿದೂರ ನೀನೆಂದು ನಂಬದೆ ಇರಲು ಬಾರದು ॥೯॥

---

೩೮. ಗಾಢ ತಿಳಿಯೊ ನೀನು ಇರುತಿಹ ಗೂಢ ಬ್ರಹ್ಮವನ್ನು
ಕಾಡುವ ಮಾಯೆಯು ಝಾಡಿಸಿ ಒದೆದು। ರೂಢಿ ಸೋಮೇ
ಗುರುವನು ಹಿಡಿದು ॥ಪ॥

ಆರು ಮೂರು ಮೀರಿ ಇರುತಿಹ ಮೂರು ದಾರಿ ಯೇರಿ ।
ಸಾರಿ ಉನ್ಮನೆಯೊಳು ತೂರುತ ಬೇಗದಿ ಈರ್ಕೈದು ನಾದವ ಸೇರಿ ॥೧॥

ಆರು ನಾನು ಎಂದು ಬೇಗದಿ ಜಾರು ಗುರುವನಂದು ।
ಸೇರುತ ಷಣ್ಮುಖಿ ತೋರುವ ಕಳೆಯೊಳು ಸಾರಿಯು ಮನವದು ನಿಂದು ॥೨॥

ಅಷ್ಟ ಮದಗಳಟ್ಟಿ ಇರುತಿಹ ಷಟ್ಚಕ್ರ ಮೆಟ್ಟಿ ।
ಕ್ರಿಷ್ಟ ಇಹ ಪರವೆರಡನು ಬಿಟ್ಟು ಅಷ್ಟ ದಳದ ಮಧ್ಯೆ ಮನವದು ನೆಟ್ಟು ॥೩॥

ಪಂಚ ಪಂಚಕವಳಿದು ಇರುತಿಹ ಪ್ರಪಂಚವೆಲ್ಲವನಳಿದು ।
ಪಂಚತತ್ವದ ಗೊಂಚಲಿನಲ್ಲಿ ಮಿಂಚಿನ ಮನೆಯೊಳು ಕಂಚಿನ ತೆರದಿ ॥೪॥

ತತ್ವವೆಲ್ಲ ಕಳೆದು ಉಳಿಮೆಯ ತತ್ವವಾವುದೆನಲು ।
ಕರ್ತೃ ಸೋಮೆಕಟ್ಟೆ ಕರಿವೃಷಭಾರ್ಯನೆ ತತ್ವಸಾಕ್ಷಿ ತತ್ವವು ತಿಳಿಯೈ ॥೫॥

---

೩೯. ತಿಳಿದು ನೋಡಿರಣ್ಣ ತತ್ವದ ಇರವ ಕೂಡಿರಣ್ಣ ॥ಪ॥

ಕಪ್ಪುರಾಗ್ರದಲ್ಲಿ ಇರುತಿಹ ಮುಪ್ಪುರದೊಡೆಯನನು ॥
ಒಪ್ಪದಿಂದ ಗುರುಕರುಣವ ಪಡೆದು ಇಪ್ಪ ಸ್ನಾನವ ಮಾಡುತ ಬೇಗದಿ ॥೧॥

ಅಷ್ಟದಳದ ಮಧ್ಯೆ ಇರುತಿಹ ಸೃಷ್ಟಿಗೊಡೆಯನನ್ನು ।
ಅಷ್ಟ ತನುವು ಕೂಡಿ ಪಟ್ಟಣವಾಗಿಹ ಅಷ್ಟ ವರ್ಣದ ದ್ವಾರಕಿ ಪುರದಿ ॥೨॥

ಮೂರು ಮುದ್ರೆಯಲ್ಲಿ ತೋರುವ ಸೂರ್ಯಚಂದ್ರರಲ್ಲಿ ।
ನಾರಿಯರಿಬ್ಬರುತೋರುವಸ್ಥಲದೊಳು ಮೀರಿದಜ್ಯೋತಿಯ ಸೇರುತನೀವು॥೩॥

ನೀರಿನ ಕೊಳದಲ್ಲಿ ಇರುತಿಹ ಪೂರ್ಣ ಜ್ಯೋತಿಯಲ್ಲಿ
ಸೇರುತ ಮನವದು ಓರೆ ಆಗದಿರೆ ನಾರಿ ರತ್ನದ ಹಾಂಗೆ ತೋರುವುದು ॥೪॥

ಮರವೆ ಕಳೆದು ಅರಿವೆ ಆಗುತ ಪರಮ ಸೋಮೆಕಟ್ಟೆ ಕರಿವೃಷಭಾರ್ಯನ।
ಚರಣಕಮಲವ ಬರಿಯ ಬಯಲೊಳು ಬೆರೆಯುತ ನೀವು ॥೫॥

---

೪೦. ಏತಕೆನಿತು ರೋತೆ ಬಾಳು । ಪ್ರೀತಿಯಿಂದ ಆತ ಗುರುವ
ನೀತಿವಿಡಿದು ತಿಳಿದು ನೋಡು ಖ್ಯಾತನಾಗುವೆ ॥ಪ॥

ಕಾಶಿಯಾತ್ರೆ ಮಾಡಬೇಡ ವೇಷವನ್ನು ಧರಿಸಬೇಡ।
ದಾಸಿಯಂದದಿ ಕಾಸಿಗೆಲ್ಲ ದೇಶ ದೇಶ ತಿರುಗಬೇಡ ॥೧॥



ನೀರ ಮುಳುಗಿ ಗಾರು ಆಗಿ ಧಾರುಣಿಯೊಳ್ ಪ್ರತಿಮೆ ಪೂಜೆ।
ಸೇರಿ ಯಮನ ಪುರದಿ ನೀನು ಸಾರಿ ಸಾರಿ ತಿರುಗಬೇಡ ॥೨॥

ಯಜ್ಞ ಕರ್ತೃ ನೀನೆಸಾಗಿ ಭಗ್ನ ಭವದ ಯಾಗ ಮಾಡಿ।
ಸ್ವರ್ಗದಲ್ಲಿ ಸುಖವ ಪಡೆದು ಮಗ್ನವಾಗಿ ಕೆಡುವೆ ಮೂಢ ॥೩॥

ಮೂರು ಮಲಗಳೊಳಗೆ ಸಿಲ್ಕಿ । ನಾರಿಯೊಡನೆ ಕೂಡಿ ಇರ್ದು।
ಧಾರುಣಿಯನೆಲ್ಲ ತಿರುಗಿ । ಧೀರ ರೋಗದಿ ಕೆಡಲುಬೇಡ ॥೪॥

ಮೇಕೆಯಂದದಿ ಗಿಡವ ಹತ್ತಿ ಆಕೆವಾಳ ಪತ್ರೆಯೆತ್ತಿ।
ಏಕೋನಾಥನ ಮರೆದು ನೀನು ಈಕೆ ಮಾಯೆಯೊಡನೆ ಕೂಡಿ ॥೫॥

ಮತ್ತೆ ಮೂರು ವೇಳೆಯುಂಡು ಅಸ್ತಮಯದಿ ಪೂಜೆ ಮಾಡಿ।
ಕತ್ತೆಯಂತೆ ಇಹಕೆ ಪರಕೆ ಸುತ್ತಿ ಸುತ್ತಿ ಕೆಡಲಿಬೇಡ ॥೬॥

ಕರ್ಮವನ್ನು ಕಳೆಯಲಿಲ್ಲ ಮರ್ಮವನ್ನು ತಿಳಿಯಲಿಲ್ಲ।
ಕರ್ಮಿ ನೀನು ಕೂರ್ಮನಂದದಿ ಉರ್ವಿಗಾತ್ರ ಪಡೆದೆ ಗಾಢ ॥೭॥

ನಾಡ ಮಾತನೆಲ್ಲ ಕಲಿತು ಗೂಢ ಬ್ರಹ್ಮವ ಮರತೆ ನೀನು।
ಬೋಡಿ ಭವದಿ ಬರುವೆಯಲ್ಲ ಮಾಡು ಆತ್ಮ ಪೂಜೆ ಗಾಢ ॥೮॥

ವೇದವನ್ನು ಓದಿ ಪಾಡಿ ಬಾಧೆ ಭವವ ನೀಗಿ ನೋಡಿ।
ಆದಿ ಸೋಮೆಕಟ್ಟೆ ಗುರುವ ಬೋಧವನ್ನು ಬೇಡಿ ಬೇಡಿ ॥೯॥

---

೪೧. ಕಂಡೆನು ಗುರುವರನ ।ಎನ್ನ ಭವ ದಂಡಲೆ ಪರಿಹರನ ॥ಪ॥

ಹರಿಯಜ ಸುರರೆಲ್ಲರು ಕಾಣದ ಗುರುಪರಮಪಾವನಮೂರ್ತಿಯ।
ಪರಮವೈರಾಗ್ಯವೆನ್ನೊಳು ನೆಲೆಗೊಂಡುಗುರುವರನಡಿಯನ್ನು ಕಂಡೆಕಂಡೆ॥೧॥

ಭಕ್ತಿಮೂರಾರ ಮೀರಿ ತೋರುವಮಹಾಯುಕ್ತಿ ಮಾರ್ಗವನು ತೋರಿ।
ಮುಕ್ತಾಮುಕ್ತಿ ಮುಕ್ತನಾದ ವಿರಕ್ತನ ಚರಣವ ಶಕ್ತಿರಹಿತ
ಮುಮುಕ್ಷುತ್ವದಿ ಕಂಡೆ ॥೨॥

ಜ್ಞಾನಪಾವುಗೆಮೆಟ್ಟಿದ ಸುಜ್ಞಾನದ ಸ್ವಾನುಭವವ ತೋರಿದ
ಜ್ಞಾನಾಜ್ಞಾನ ನಾನು ನೀನೆಂಬುವ ಭಾವವು ತೋರದೆ
ತಾನುತಾನು ತಾನಾದ ಗುರುವ ॥೩॥

ಕಂಡೆಕಂಡೆನು ಉದ್ದಂಡಗುರುವನ ಖಂಡ ಬ್ರಹ್ಮದೆ
ನಿಜಗೊಂಡಮೂರುತಿಯ ।
ಮಂಡಲ ಮೂರರ ಮಧ್ಯದಿ ತೋರುವ ಕೆಂಡಗಣ್ಣೊ
ಡೆಯನ ಕಂಡೆ ನಾ ಕಂಡೆ ॥೪॥

ಮನ್ನಿಸಿ ಕರೆದೆನ್ನನು "ನಿನ್ನ ನೀನೆ ಚನ್ನಾಗಿ ತಿಳಿ" ಎಂದನು ।
ಉನ್ನತ ಸೋಮೆಕಟ್ಟೆ ಈಶನ ಎನ್ನೊಳು ಭಿನ್ನವಿಲ್ಲದೆ
ಕಂಡು ನಿಜ್ಜೆರಗಾದೆನು ॥೫॥

---

೪೨. ಹೋಗಿ ನೋಡುವ ಬನ್ನಿರಿ ಶ್ರೀಗುರುವರನ
ಹೋಗಿ ನೋಡುವ ಬನ್ನಿರಿ ॥ಪ॥

ಹೋಗಿ ನೋಡುವ ಬನ್ನಿರಿ ಯೋಗಿಚರಣವ ।
ರಾಗರಹಿತ ಗುರು ನಾಗಭೂಷಣನನ್ನು ॥೧॥

ಪಾದ ಬಾಹ್ಯದಿ ಪವಳ ವೇದಾದಿ ಬ್ರಹ್ಮವು ।
ಬೋಧಮಯನು ಗುರು ಆದಿಯ ರುದ್ರನ ॥೨॥

ಗುರು ಎಂಬ ವಾಕ್ಯವು ಹರನ ಮಂತ್ರದ ಮೂಲ
ಗುರುಪಾದ ಧ್ಯಾನವೆ ಪರಮಪದವಿ ಮೂಲ ॥೩॥

ಗುರುಪಾದವನು ಕಂಡು ಅರಿವಿನಿಂ ಕೂಡಲು ।
ಸ್ಥಿರಮುಕ್ತಿ ಪದವಿ ಬೆರೆದು ನೋಡುವ ಬನ್ನಿರಿ ॥೪॥

ಧ್ಯಾನಧಾರಣವೆಂಬ ಮೌನ ಸೋಮೆಕಟ್ಟೆ ।
ಜ್ಞಾನಿಯ ಕೂಡಲು ನೂನದಿ ಸಾವಮದಿ ॥೫॥

---



೪೩. ಕುಶಲ ಕೈಲಾಸ ಈಶನೆ । ಎನ್ನಮನದೊಳು ವಾಸ ॥ಪ॥

ಅಸಮ ಭಕ್ತರ ಮನದ ವಾಸನೆ । ಕುಶಲ ಭಕ್ತಿಯ ತೋರಿ ಎನ್ನನು।
ವಸುಮತಿಯೊಳು ಸುವರ್ಣಪುರದಿ ಜಸವಡೆದಿಹ ಈಶಾಧೀಶ ॥೧॥

ಅಷ್ಟ ತನುವದು ಕೂಡಿದ ಮಹಾ ಪಟ್ಟಣದಿ ನೀನಿರ್ಪೆ ದೇವ।
ಅಷ್ಟ ಮದಗಳ ನಷ್ಟ ಮಾಡಿದ ಶ್ರೇಷ್ಠ ಗುರುವರ ಶೇಷ ವಾಸ ॥೨॥

ಅಜಹರಿಯು ಸುರಪ ವಿಬುಧರು ಗಜಮುಖನು ನರನಾಗ ಕಿನ್ನರ॥
ಭಜಿಸಿ ಕಾಪಾಡುತ ವರವ ಬೇಡುತ ಅಜಗಣಾದಿಗಳೆಲ್ಲ ಭಜಿಪರು ॥೩॥

ಮೂರು ಮಂಡಲ ಮಧ್ಯೆ ತೋರುವ ಮೂರು ಕಣ್ಣ ದೇವ ನಿಮ್ಮಯ॥
ಮೂರು ಆತ್ಮರ ಮೂಲ ಕರ್ತನೆ ಮೂರು ರೂಪು ತೋರು ತೋರು ॥೪॥

ಆ ಮಹಾ ಉನ್ಮನೆಯ ವಾಸನೆ ಸೋಮಶೇಖರ ಸಲಹು ಈಶನೆ।
ಸೋಮೆಕಟ್ಟೆ ವಾಸ ವಾಸಪ್ರೇಮ ಸದ್ಗುರು ಸಲಹು ಸಲಹು ॥೫॥

---

೪೪. ಶ್ರೀಗುರು ಬಸವಲಿಂಗ। ಧಾಮ ನುತ ಜನಸಂಗ।
ಸ್ವಾಮಿ ನೀ ಎನ್ನ ಮಾನ್ಯನದಿ ನಿಂದು
ಪ್ರೇರಣೆಯ ಮಾಡಿ ನೀಂ। ಬಾಲಕರ ತೊದಲ್ನುಡಿ।
ಯ ಲಾಲಿಸಿ ಪಾಲಿಪುದು ಶರಣಾ ಶರಣಾ ॥ಪ॥

ತಂದೆ ಗುರು ರಾಚಪ್ಪ ಇಂದುಧರ ರುದ್ರೇಶ।
ಹೊಂದಿದಾ ಜಂಗಮವು ಪ್ರಭು ಚನ್ನಬಸವ॥
ಇಂದಿವರ ಬಲವಿರಲು ಮುಂದೆನಗೆ ಜನ್ಮದ।
ದಂದುಗಗಳೇನಿಲ್ಲವೆಂದಿರ್ಪೆನು ॥೧॥

ಬಲ್ಲವರು ಬಾಲ್ನುಡಿಗಳಲ್ಲೇ ತಪ್ಪಿದ್ದೊಡಂ।
ತಳ್ಳಿಹಾಕದೆ ಮತ್ತೆ ಒಳ್ಳೆನಿಸಿ।

ನೆಲ್ಲಡಿಯ ಕರುಣವನು ನಿಲ್ಲದೆ ಪಾಲಿಪುದು।
ಎಂದೆಲ್ಲ ಶಿವಶರಣರಿಗೆ ಎರಗಿ ಬಾಳ್ವೆ ॥೨॥

ಹಿಂದಣ ಭವಗಳು ಸಂದು ಹೋದುವು ಬಹಳ ಮುಂದೆ।
ನಿಮ್ಮಯ ಕಂದನೆಂದು ತಿಳಿದು॥
ಇಂದು ಸೋಮೇಕಟ್ಟೆ ಕರಿವೃಷಭ ಲಿಂಗದೊಳ್।
ಹೊಂದಿದ ಪದವಿತ್ತುಸಲಹುದೆನ್ನ ॥೩॥

---

೪೫. ಆಶ್ಚರ್ಯವಾಯಿತಲ್ಲ। ನಮಗೊಂದು ನಿಶ್ಚಯವು ತೋರಿತಲ್ಲ।
ಸಚ್ಚಿದಾನಂದೈಕರಸವೆ ವಿಗ್ರಹವಾಗಿ ಎಚ್ಚರವ ಕೊಟ್ಟಿತಲ್ಲ ॥ಪ॥

ಯಾಕಿನ್ನು ಮರವೆ ನಿಮಗೆ ವ್ಯವಹಾರ ಲೋಕದಂತಾಯಿತೆಂದು ।
ಈ ಶುಕ್ಲವತ್ಸರದ ಪುಷ್ಯೋತ್ತರ ನಾಲ್ಕನೆಯ ಶುಕ್ರವಾರದ ರಾತ್ರಿಲಿ ॥೧॥

ರಾಜೋಟದೇವ ಬಂದು ವಾಚಕ್ಕೆ ಗೋಚರವಾಗಿಸೂಚಿಸಿದಕಥದಿಂದ
ನಮಗಾಯಿತೀ ಹುಚ್ಚು ಈಚೆ ಜನ ಬಲ್ಲರೇನೊ ॥೨॥

ಪರಮ ಪ್ರಕೃತಿಯ ಸ್ಪರ್ಶದಿ ಅಂಧಕನು ಕುರುಹು ತೋರಿದ ತೆರದಲಿ
ಅರಿವು ಮರವೆಯ ಸಂಗದಿಂದೊಗೆದ ಶರೀರವಿದನರಿದ ಮಾತ್ರವೆ ನಾಶವು ॥೩

ಮರವೆ ಮೋಡಗಳಿಲ್ಲವು ತಾವ್ಮುಡಿ ಅರಿವು ರವಿ ಕಾಣಗೊಡದಾ
ತೆರನಂತೆ
ಪರಿಪರಿಯ ವಿಧವಾದ ಸಂಸಾರ ಪರಿಹರವ ಮಾಡೆನುತಲಿ ॥೪॥

ಯಾಕಿನ್ನು ಸಾವಕಾಶವು। ಲೌಕಿಕದ ಬಾಕಿ ಇನ್ನೇನು ನಮಗೆ।
ಸ್ವೀಕರಿಸಿ ನೀ ಸೋಮೆಕಟ್ಟೆ ಕರಿವೃಷಭೇಂದ್ರ ಲಿಂಗದೊಳೇಕವಾಗಂ
ದೊರೆದನು ॥

---



೪೬ ಏಕಾಂತ ಸೇರಲಿಬೇಕು ನಾವಿನ್ನು ಮೂಕರಾಗಲಿಬೇಕು।
ಏಕಾತ್ಮ ಧ್ಯಾನದೊಳು ಬಾಲಲೀಲೆಯ ಧರಿಸಿ ಭವಾರಣ್ಯ ದಹಿಸಬೇಕು ॥ಪ॥

ಇಷ್ಟವನು ಪೂರೈಸಿರೋ ಲೌಕಿಕದ ಗೋಷ್ಠಿಯನು ಬಿಡಿಸಿರಯ್ಯ।
ಶ್ರೇಷ್ಠ ಪರಶಿವ ನಿಮಗೆ ಭಕ್ತಿ ಜ್ಞಾನೈಶ್ವರ್ಯ ಎಷ್ಟು ಬೇಡಿದರೀವನು ॥೧॥

ನಿಮ್ಮ ಭಕ್ತಿಯ ಪಾಶವು ಚರಣಗಳ ಚನ್ನಾಗಿ ಬಿಗಿದಿರ್ಪುದು।
ಇನ್ನೆಲ್ಲೂ ಅತ್ತಿತ್ತ ಚರಿಸದಂತೆ ನಿಮಗೆ ಸಂಚಿತ ರೂಪಾದವು ॥೨॥

ಮುಕ್ತ ಬಂದಲ್ಲಿ ನಿಮಗೆ ಪೇಳುವೊಡೆ ವಿರಕ್ತಿ ಮುಂದರಿವುದೆಮಗೆ।
ನೋಡುವೊಡೆ ಬಾಲ್ಯದಲಿ ಬಹಳ ಭ್ರಮೆಯಿರುವಂತೆ ತೋರದೇಹವು ಕಾ
ಣ್ಬದು ॥೩॥

ಕಾಯ ವಾಚವು ಮಾನಸ ಮೂರರೊಳು ತಾನೇ ಶಿವನಿರ್ಪನಾಗಿ।
ಬಾಯ ಮನ್ನಣೆಯಲ್ಲ ಲೋಕಸ್ಥಂಗಿಗನಲ್ಲ ಪರಶಿವನು ತಾನೆ ಬಲ್ಲ ॥೪॥

ಒಂದು ತಿಂಗಳು ವಾಯಿದೆ ನಮನಿಮಗೆ ಎರಡು ತಿಂಗಳು ಆಗಲು।
ಬಂಧರಹಿತನು ಸೋಮೇಕಟ್ಟೆಕರಿವೃಷಭೇಂದ್ರ ಎಂದಿಗೂದೊರೆಯ
ನೋಡಿ ॥೫॥

---

೪೭. ನಾವಾದರೊ ಹೋಗುತೇವೆ ನೀವಾದರೀದೇ
ಹವೇನಾದರೂ ಮಾಡಿಕೊಳ್ಳಿ ನಮಗೇತಕಿದರ ಸಂಗ ॥ಪ॥

ದೇಹಬಿಟ್ಟು ಹೋದರೆಂಬ ಭಾವವ ಮಾಡಬೇಡಿ
ದೇಹಗೇಹವು ಬ್ರಹ್ಮಾಂಡದೊಳಹೊರಗೆಲ್ಲ ॥೧॥

ಎಲ್ಲವೂ ನಾವೆಯಾಗಿ ಎಲ್ಲಕ್ಕೂ ಸಾಕ್ಷಿಯಾಗಿ।
ಎಲ್ಲೆಲ್ಲಿ ನೋಡಿದರಲ್ಲಲ್ಲಿ ನಾವೆಯಾಗಿ ॥೨॥

ಸ್ವರ್ಗ ಮರ್ತ್ಯವು ಭರ್ಗ ಲೋಕಾಪೇಕ್ಷಿತರಲ್ಲ
ಭರ್ಗೋದೇವನೆ ಸಾಕ್ಷಿ ನಿರ್ಗುಣಾನಂದದೊಳು ॥೩॥

ಧರೆಯೊಳು ಮುಕ್ಷುಕಪುರಿ ಪರಮ ಸದ್ಭಕ್ತರಿಪ್ಪ ।
ಇರುವ ನಿಮಿತ್ತದಿಂದ ಪರಶಿವ ಸಮಾಧಿಯೊಳು ॥೪॥

---

೪೮. ತಿರುಗಲಾರೆವೋ ನಾವು ಸೊರಗಲಾರೆವೊ ॥ಪ॥

ತಿರುಗಿ ತಿರುಗಿ ಪರರ ಬೇಡಿ ಕರಗಿ ಕೊರಗಿ ಸಾಯಲಾರೆ ।
ಪರಮ ಗುರುವೆ ನಿಮ್ಮ ಕರುಣದಿರವಿನೊಳಗೆ ಇರಿಸಿ ಸಲಹೊ ॥೧॥

ಎಷ್ಟು ಜನ್ಮವಾಯ್ತೊ ಹುಟ್ಟಿ ಸೃಷ್ಟಿಯೆಲ್ಲವನ್ನು ತಿರುಗಿ ।
ಹೊಟ್ಟೆಹೊರೆದುದಲ್ಲದಿಹದೊಳಿಷ್ಟು ಸುಖವು ಕಾಣಲಿಲ್ಲ ॥೨॥

ಧರೆಯೊಳೀ ಮುಕ್ಷುಕಪುರದಲಿರುವ ಸೋಮೆಕಟ್ಟೆ
ಕರಿವೃಷಭಲಿಂಗದಲ್ಲಿ ಬೆರಸಿ ಹೋಗುತೇವೆ ॥೩॥

---

೪೯. ತಿಳಿದುದನು ಪೇಳ್ವೆ ಬಲ್ಲವರು ಲಾಲಿಸಿ ನೀವು ।
ಇಳೆಯೊಳಾದಿಗೆ ಆಧಾರವಾದುದನು ॥ಪ॥

ಸತಿಪತಿಗಳಿಲ್ಲದೆಯೆ ಉತ್ಪತ್ತಿಯೊಂದಾಯ್ತು ।
ಮತಿಗಶಕ್ಯವು ಅದರೊಳೊಳ್ಮೊಳಕೆ ಮೂರಾಯ್ತು ।
ಅತಿಯಾಗಿ ಬೆಳೆದಂಥ ಮೊಳಕೆ ವಿವರವ ಪೇಳ್ವೆ ।
ಗತಿಯ ಬಯಸುವರೆಲ್ಲ ಲಾಲಿಸಿ ತಿಳಿದು ನೋಡಿ ॥೧॥

ಮೊದಲ ಮೊಳಕೆಗೆ ಐದು ವಿಧವಾದ ಕೊನೆಯಾಯ್ತು ।
ಅವರೊಳಗೆ ಹುಸಿ ಕಾಯಿ ವಿಧಿಸಿದರೆ ದಿಟವಾಯ್ತು ॥



ಮುದವಲರಿ ಮೋಕ್ಷಪಡೆಯುವರೆಲ್ಲ ಇದನರಿತು ।
ಒಡೆದು ಕಳೆಯಿರಿ ಭವದ ಬಂಧವನು ॥೨॥

ನಡುವಣ ಮೊಳಕೆಗೆ ಬುಡದಂತೆ ಎಲೆ ನಾಲ್ಕು ।
ಕಡೆಯ ಮೊಳಕೆಗೆ ನಾಲ್ಕು ಬುಡವಾಗಿ ಇರುತಿಹುದು ॥
ನಡುವಣ ಮೊಳಕೆಯೆ ಕಡೆದಿಹುದು ಇವು ಮೂರ
ಒಡೆನಾದವ ಸೋಮೆಕಟ್ಟಿ ಕರಿವೃಷಭ ॥೩॥

---

೫೦. ತರಳೆ ಬೇಗದಿ ತಂದು ತೋರೆ । ತಾರಕವ ಬೋಧಿಸಿದನ ।
ತಾರಕವ ಬೋಧಿಸಿದನ । ಶೃತಿಸಾರದಮೃತವ ಎರೆದನಾ ॥ಪ॥

"ಪರಮ ಅನುಭವಬೋಧೆ" ಬೋಧಿಸಿ ಕರಣದೊಳಹೊರಗಿರ್ಪನ ।
ಶರಣ ಜನರ ಹೃದಯಕಮಲದಿ ನಿರುತ ಗೀತವ ಪಾಡುವನ ॥೧॥

"ಅನುಭವದ ಸಾರ" ವನು ಎರೆದು ಮನದ ಮಲಿನವ ತೊಳೆದನಾ ।
ಅನವರತ "ವಿವೇಕಚಿಂತಾಮಣಿ" ಯನ್ನೊಳಗಿಟ್ಟನ ॥೨॥

"ಪಾರಮಾರ್ಥ ಪ್ರಕಾಶಿಕೆ" ಯೊಳೆನ್ನ ಪರಮಜೀವರ ಕೂಡಿದನ ।
ಧೀರ ಕೈವಲ್ಯವನು ಪಡೆಯುವ ಸಾರ ಪದ್ಧತಿ ಪೇಳ್ದನ ॥೩॥

ಶಂಭುರೂಪವನಿಂಬುಗೊಂಡು ಕುಂಭಿಣಿಯೊಳ್ ನಿಂದಿರುವನ ।
ಹಂಬಲಿಸುತಿಹ ಯೋಗಿಜನಕೆ ಚಿದಂಬರವೆ ತಾನಾದನ ॥೪॥

ಸೋಮೆಕಟ್ಟೆಯ ನೇಮಸ್ಥಲದೊಳು ಕಾಮಿಸೆ ನಗೆಯು ಒಲಿದನ ।
ನಾಮರೂಪು ಕ್ರಿಯೆಗಳಿಲ್ಲದ ನಿಸ್ಸೀಮ "ನಿಜಗುಣ" ಧಾಮನ ॥೫॥

---